


ಕರ್ನಾಟಕ

# ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

Karnataka

# Scout & Guide

Monthly Magazine

| Vol -65 | Issue-04 | APRIL 2024 | Pages: 28 | Annual Subscription: ₹ 100/- |
|---|---|---|---|---|
| ಸಂಪುಟ: 65 | ಸಂಚಿಕೆ: 04 | ಏಪ್ರಿಲ್ 2024 | ಪುಟಗಳು: 28 | ವಾರ್ಷಿಕ ಚಂದ ರೂ. 100/- |


## ಹೃದಯಪೂರ್ವಕ ಅಭಿನಂದನೆಗಳು



ಉಡುಪಿ ಜಿಲ್ಲೆ ಕಾರ್ಕಳದ
ಕ್ರಿಯೇಟಿವ್ ಎಜುಕೇಷನ್ ಫೌಂಡೇಶನ್‌ನ
**ಕು. ಸಾನ್ವಿರಾವ್,** ರಾಜ್ಯ ಪುರಸ್ಕಾರ ಗೈಡ್
ದ್ವಿತೀಯ ಪಿ.ಯು.ಸಿ ವಾಣಿಜ್ಯ ವಿಭಾಗದಲ್ಲಿ
598 (99.66%) ಅಂಕ ಪಡೆದು
ರಾಜ್ಯದಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿರುತ್ತಾರೆ.



ದಕ್ಷಿಣ ಕನ್ನಡ ಜಿಲ್ಲೆ, ಮೂಡಬಿದ್ರೆಯ
ಆಳ್ವಾಸ್ ಪದವಿ ಪೂರ್ವ ಕಾಲೇಜಿನ
ರೇಂಜರ್ **ಕು. ಸಹನಾ ಕೊಕಟನೂರ**
ದ್ವಿತೀಯ ಪಿ.ಯು.ಸಿ ವಾಣಿಜ್ಯ ವಿಭಾಗದಲ್ಲಿ
592 (98.66%) ಅಂಕ ಪಡೆದು
ರಾಜ್ಯದಲ್ಲಿ 6ನೇ ಸ್ಥಾನವನ್ನು ಪಡೆದುಕೊಂಡಿರುತ್ತಾರೆ.

## ವಿವಿಧ ಜಿಲ್ಲೆಗಳಲ್ಲಿ ನಡೆದ ಮತದಾನ ಜಾಗೃತಿ ಶಿಬಿರಗಳಲ್ಲಿ ಭಾಗವಹಿಸಿದ ಸ್ಕೌಟ್ಸ್-ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳು


ಬಾಗಲಕೋಟೆ


ಬೆಂಗಳೂರು ಗ್ರಾಮಾಂತರ


ಬೆಳಗಾವಿ


ಚಿಕ್ಕಬಳ್ಳಾಪುರ


ಹಾಸನ


ರಾಯಚೂರು


ವಿಜಯಪುರ


ಯಾದಗಿರಿ

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬಿ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ

ಸಿ.ಪಿ. ಪರಮೇಶ್ವರ

ಚಳ್ಳಕೆರೆ ಯರ್ರಿಸ್ವಾಮಿ

ಎಂ.ಎನ್. ಷಡಕ್ಷರಿ

ಸಿ.ವಿ. ತಿರುಮಲರಾವ್

ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ

ಡಾ. ವಸುಂಧರ ಭೂಪತಿ

ಡಾ. ಶಕುಂತಲ

ಪ್ರಭಾವತಿ ಪಾಟೀಲ್



ಸಂಚಿಕೆಯ ವಾರ್ಷಿಕ ಚಂದಾ ರೂ. 100/–
ವಿದ್ಯಾಸಂಸ್ಥೆ ಹಾಗೂ ಸಂಘ–ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/–

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು – 560 001
ಇಲ್ಲಿಗೆ ಕಳುಹಿಸಲು ಕೋರಿದೆ.


# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide

MONTHLY NEWS MAGAZINE


Vol: 65 Issue : 04 April 2024


## ಒಳಪುಟಗಳಲ್ಲಿ...


ರಾಜ್ಯ ಮುಖ್ಯ ಆಯುಕ್ತರ ನುಡಿ ...04

ಸಂಪಾದಕೀಯ ...05

2023–24ನೇ ಸಾಲಿನ ದ್ವಿತೀಯ ಪಿ.ಯು.ಸಿಯಲ್ಲಿ
ಸಾಧನೆ ಮಾಡಿದ ಸ್ಕೌಟ್ಸ್–ಗೈಡ್ಸ್‌ಗಳು ...06

ಮೇ ತಿಂಗಳಲ್ಲಿ ಏರ್ಪಡಿಸಿರುವ ರಾಜ್ಯ ಸಂಸ್ಥೆಯ
ವಿವಿಧ ಸಮಿತಿಗಳ ಸಭೆಯ ವಿವರಗಳು ...07

ಜಿಲ್ಲಾ ವಾರ್ತೆಗಳು ...10

ಮೇ ತಿಂಗಳ ಕಾರ್ಯಕ್ರಮಗಳು ...15

ಶ್ರದ್ಧಾಂಜಲಿ ...25


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್–ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ಶುಭಾಶಯಗಳು.

2023–24ನೇ ಸಾಲಿಗೆ ನಮ್ಮ ರಾಜ್ಯ ಸಂಸ್ಥೆ 6.70 ಲಕ್ಷ ಗಣತಿಯನ್ನು ಪೂರ್ಣಗೊಳಿಸಿ ಸಾರ್ವಕಾಲಿಕ ದಾಖಲೆ ನಿರ್ಮಿಸಿದೆ. OYMS (ಆನ್‌ಲೈನ್ ಯುವ ನಿರ್ವಹಣಾ ವ್ಯವಸ್ಥೆ)ಯಲ್ಲಿ 3 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ಸದಸ್ಯರನ್ನು ನೋಂದಾಯಿಸುವ ಪ್ರಕ್ರಿಯೆಯಲ್ಲಿ ಸಾಧ್ಯವಾದಷ್ಟು ಪ್ರಗತಿ ಸಾಧಿಸಿದ್ದೇವೆ. ಈ ಎಲ್ಲ ಸಾಧನೆಗೆ ಕಾರಣರಾಗಿರುವ ಪ್ರತಿಯೊಬ್ಬರಿಗೂ ಧನ್ಯವಾದಗಳನ್ನು ತಿಳಿಸುತ್ತಾ, ಹಗಲಿರುಳು ಶ್ರಮಿಸಿದ ಸಿಬ್ಬಂದಿಗಳ ಬದ್ಧತೆ, ನಮ್ಮ ಪದಾಧಿಕಾರಿಗಳ ಸಲಹೆ, ಮಾರ್ಗದರ್ಶನ ಮತ್ತು ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳ ಸಹಕಾರವನ್ನು ನಾನು ಸ್ಮರಿಸುತ್ತೇನೆ.

2023–24ನೇ ಸಾಲಿನ ದ್ವಿತೀಯ ಪಿ.ಯು.ಸಿ. ಫಲಿತಾಂಶ ಪ್ರಕಟಗೊಂಡಿದೆ. ಈ ಬಾರಿ ಶೇ. 81.5 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿ ಉತ್ತಮ ಸಾಧನೆ ಮಾಡಿದ್ದಾರೆ. ನಮ್ಮ ಸ್ಕೌಟ್ಸ್–ಗೈಡ್ಸ್‌ಗಳೂ ಸಹ ಗಣನೀಯ ಪ್ರಮಾಣದಲ್ಲಿ ಉನ್ನತ ಶ್ರೇಣಿಯೊಂದಿಗೆ ತೇರ್ಗಡೆಯಾಗುವ ಮೂಲಕ ನಮ್ಮ ಸಂಸ್ಥೆಗೆ ಹೆಮ್ಮೆ ತಂದಿದ್ದಾರೆ. ಉಡುಪಿ ಜಿಲ್ಲೆಯ ಕಾರ್ಕಳದ ಕ್ರಿಯೇಟಿವ್ ಎಜೂಕೇಷನ್ ಫೌಂಡೇಶನ್‌ನ ರಾಜ್ಯ ಪುರಸ್ಕಾರ ಪ್ರಶಸ್ತಿ ಪುರಸ್ಕೃತೆ ಕುಮಾರಿ ಸಾನ್ವಿ ರಾವ್, ವಾಣಿಜ್ಯ ವಿಭಾಗದಲ್ಲಿ 1ನೇ ರ್‍ಯಾಂಕ್ ಪಡೆದಿರುತ್ತಾಳೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆಯ ಆಳ್ವಾಸ್ ಪದವಿ ಪೂರ್ವ ಕಾಲೇಜಿನ ರೇಂಜರ್ ಕುಮಾರಿ ಸಹನಾ ಕೊಕಟನೂರ ವಾಣಿಜ್ಯ ವಿಭಾಗದಲ್ಲಿ 6ನೇ ರ್‍ಯಾಂಕ್ ಪಡೆದು ನಮ್ಮ ಸಂಸ್ಥೆಗೆ ಕೀರ್ತಿ ತಂದಿರುತ್ತಾರೆ. ಇವರುಗಳಿಗೆ ಸಂಸ್ಥೆಯ ಪರವಾಗಿ ಅಭಿನಂದನೆಗಳು. ಸಂಸ್ಥೆಯ ಪರವಾಗಿ ಎಲ್ಲಾ ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯವನ್ನು ಹಾರೈಸುತ್ತೇನೆ.

ರಾಜ್ಯದಲ್ಲಿ 18ನೇ ಲೋಕಸಭೆಗೆ ಚುನಾವಣೆ ನಡೆಯುತ್ತಿದೆ. ನಮ್ಮ ಅನೇಕ ಸ್ಕೌಟ್ಸ್–ಗೈಡ್ಸ್‌ಗಳು ಮೊಟ್ಟಮೊದಲ ಬಾರಿಗೆ ಮತಚಲಾವಣೆಯ ಹಕ್ಕನ್ನು ಹೊಂದಿದ್ದಾರೆ, ಅವರೆಲ್ಲರಿಗೂ ಶುಭ ಹಾರೈಸುತ್ತೇನೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಮತದಾನದ ದಿನದಂದು ಜಿಲ್ಲಾಡಳಿತಗಳು ನಮ್ಮ ರೋವರ್ಸ್ ರೇಂಜರ್ಸ್‌ಗಳ ಸೇವೆಯನ್ನು ಬಳಸಿಕೊಳ್ಳುತ್ತಿವೆ. ಸೇವೆಯಲ್ಲಿ ತೊಡಗುವ ನಮ್ಮ ಯುವಕರುಗಳು ಸೇವೆ, ಶಿಸ್ತು, ಸಂಯಮ ಮತ್ತು ಪಕ್ಷಾತೀತ ನಡವಳಿಕೆಗಳನ್ನು ಪ್ರದರ್ಶಿಸುವ ಮೂಲಕ ಎಂದಿನಂತೆ ನಮ್ಮ ಸಂಸ್ಥೆಯ ಗೌರವವನ್ನು ಎತ್ತಿಹಿಡಿಯುತ್ತಾರೆಂಬ ವಿಶ್ವಾಸ ನನಗಿದೆ.

2024–25ನೇ ಸಾಲಿನ ನಮ್ಮ ಸಂಸ್ಥೆಯ ಚಟುವಟಿಕೆಗಳು, ತರಬೇತಿ ಶಿಬಿರಗಳು ಮತ್ತು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ರಾಜ್ಯ ಸಂಸ್ಥೆಯ ಎಲ್ಲ ಸಮಿತಿಗಳೂ ರಚನೆಯಾಗಿದ್ದು, ಮೇ ತಿಂಗಳಲ್ಲಿ ಎಲ್ಲ ಸಮಿತಿಗಳ ಸಭೆಗಳನ್ನು ನಡೆಸಿ ಕಾರ್ಯ ಚಟುವಟಿಕೆಗಳಿಗೆ ಚಾಲನೆ ನೀಡಲಿದ್ದೇವೆ. ಕಾರ್ಯಕ್ರಮಗಳ ಸಮಿತಿಯ ಸಭೆ ನಡೆಸಿ, ಈ ಸಾಲಿನ ಕಾರ್ಯಕ್ರಮಗಳ ರೂಪುರೇಷೆಗಳನ್ನು ಸಿದ್ಧಪಡಿಸಲಿದ್ದೇವೆ. ಈ ತಿಂಗಳು ನಡೆಯಲಿರುವ ರಾಜ್ಯ ಕಾರ್ಯಕಾರಿ ಸಮಿತಿಯಲ್ಲಿ ಇವುಗಳಿಗೆ ಅನುಮೋದನೆ ಪಡೆದು ಕಾರ್ಯೋನ್ಮುಖರಾಗಲಿದ್ದೇವೆ. 2024–25ನೇ ವರ್ಷದ ನಮ್ಮ ಎಲ್ಲ ಚಟುವಟಿಕೆಗಳು, ತರಬೇತಿಗಳು, ಕಾರ್ಯಕ್ರಮಗಳು ಯಶಸ್ವಿಯಾಗಲು ಎಲ್ಲರ ಸಹಕಾರವನ್ನು ಅಪೇಕ್ಷಿಸುತ್ತೇನೆ.

ಕನ್ನಡ ಚಲನಚಿತ್ರರಂಗದ ಜನಪ್ರಿಯ ಕಲಾವಿದರಾದ ಶ್ರೀ ದ್ವಾರಕೀಶ್ ಅವರು ನಮ್ಮನ್ನಗಲಿದ್ದಾರೆ. ನಟರಾಗಿ, ಹಾಸ್ಯಕಲಾವಿದರಾಗಿ, ನಿರ್ಮಾಪಕ, ನಿರ್ದೇಶಕರಾಗಿ ತಮ್ಮದೇ ಆದ ಛಾಪನ್ನು ಮೂಡಿಸಿರುವ ಅವರ ಅಗಲಿಕೆಯಿಂದ ಕರ್ನಾಟಕ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ನಮ್ಮ ಸಂಸ್ಥೆ ಅವರ ನಿಧನಕ್ಕೆ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಮನುಷ್ಯನ ಬದುಕಿಗೆ ಅತ್ಯಗತ್ಯವಾದ ಗಾಳಿ, ನೀರು ಮತ್ತು ಆಹಾರ ಗಳೆಲ್ಲವೂ ಅಪಾಯದ ಅಂಚಿನಲ್ಲಿರುವ ಈ ಕಾಲಘಟ್ಟದಲ್ಲಿ
ಇವುಗಳ ಸುರಕ್ಷಿತ ಬಳಕೆ ನಮ್ಮೆಲ್ಲರ ಮೊದಲ ಆದ್ಯತೆಯಾಗಲಿ

# ಸಂಪಾದಕೀಯ



ಶ್ರೀ ಪಿ.ಜಿ.ಆರ್. ಸಿಂಧ್ಯರವರು ಪೋಷಕರಾಗಿ, ಡಾ॥ ಗೊ.ರು. ಚನ್ನಬಸಪ್ಪರವರು ಗೌರವ ಅಧ್ಯಕ್ಷರಾಗಿ, ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪರವರು ಅಧ್ಯಕ್ಷರಾಗಿ, ಶ್ರೀ ಎನ್. ಶ್ರೀನಿವಾಸನ್‌ರವರ ಸಹ ಸಂಪಾದಕತ್ವ ಮತ್ತು ಶ್ರೀ ಬಿ.ಎಸ್. ರವೀಂದ್ರರವರ ಸಂಚಾಲಕತ್ವದಲ್ಲಿ ಮತ್ತು ಪ್ರತಿಭಾನ್ವಿತ ಸದಸ್ಯರುಗಳನ್ನು ಒಳಗೊಂಡ ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಮಾಸಿಕ ವಾರ್ತಾ ಪತ್ರಿಕೆಗೆ ನನ್ನನ್ನು ಸಂಪಾದಕನ ಸ್ಥಾನ ನೀಡಿ ಪತ್ರಿಕೆಯು ತನ್ನ ಕೆಲಸ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಣೆ ಮಾಡುವಲ್ಲಿ ಪ್ರೇರಕರುಗಳಾಗಿ ಮಾರ್ಗದರ್ಶನ ಮಾಡುತ್ತಿರುವುದು ಹೆಮ್ಮೆಯ ವಿಷಯ. ಈ ಮಾಸ ಪತ್ರಿಕೆಯ ಸಂಪಾದಕರ ಅನಿಸಿಕೆಗಳನ್ನು ಪ್ರಕಟಿಸಬೇಕೆಂಬ ರಾಜ್ಯ ಮುಖ್ಯ ಆಯುಕ್ತರವರ ಆದೇಶದ ಮೇರೆಗೆ ಏಪ್ರಿಲ್ 2024ರ ಸಂಚಿಕೆಯಿಂದ ಪ್ರಾರಂಭಿಸಿ, ನನ್ನ ಸಂಪಾದಕೀಯ ಅನಿಸಿಕೆಗಳನ್ನು ತಿಳಿಸಲು ಇಚ್ಛಿಸಿರುವುದನ್ನು ತಮ್ಮಗಳ ಗಮನಕ್ಕೆ ತರಬಯಸುತ್ತೇನೆ.

2023–24ನೇ ಶೈಕ್ಷಣಿಕ ವರ್ಷವು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಚಳವಳಿಯ ಯೋಜಿತ ಎಲ್ಲಾ ಕಾರ್ಯಕ್ರಮಗಳು, ಚಟುವಟಿಕೆಗಳು ಮತ್ತು ತರಬೇತಿಗಳ ನಿರ್ವಹಣೆಯಲ್ಲಿ ಆದರ್ಶಪ್ರಾಯವಾಗಿ ಗುರಿ ಮೀರಿ ಸಾಧಿಸಿ, ಸಾರ್ವಕಾಲಿಕ ದಾಖಲಾತಿಯಾಗಿ (All time record) ಮುನ್ನಡೆದಿರುವುದು ಹರ್ಷದಾಯಕವಾಗಿರುತ್ತದೆ.

ವಿಶೇಷವಾಗಿ ಮಾರ್ಚ್ 2024ರ ಅಂತ್ಯದ ಒಳಗೇ ದಾಖಲಾಗಬೇಕಾದ 2023–24ನೇ ಶೈಕ್ಷಣಿಕ ಸಾಲಿನ ಸ್ಕೌಟ್ಸ್–ಗೈಡ್ಸ್ ಗಣತಿ, ಒವೈಎಂಎಸ್ ದಾಖಲಾತಿಗಳ ಸಾಧನೆ ಈ ಹಿಂದಿನ ಎಲ್ಲಾ ವರ್ಷಗಳ ಸಾಧನೆಗಳಿಗಿಂತ ಹೆಚ್ಚಿನದಾಗಿದ್ದು, ಸಾರ್ವಕಾಲಿಕ ದಾಖಲಾತಿ ಆಗಿದೆ ಎಂಬುದನ್ನು ತಿಳಿಸಲು (All time record) ಹರ್ಷಿಸುತ್ತೇನೆ. 2023–24ರ ಒಟ್ಟು ಗಣತಿ 6,71,000 (ಆರು ಲಕ್ಷದ ಎಪ್ಪತ್ತೊಂದು ಸಾವಿರ) ಆಗಿದ್ದು, ಒ.ವೈ.ಎಂ.ಎಸ್. ದಾಖಲಾತಿ 3,09,036 (ಮೂರು ಲಕ್ಷದ ಒಂಬತ್ತು ಸಾವಿರದ ಮೂವತ್ತಾರು) ಆಗಿರುವುದರಲ್ಲಿ ಸಂಸ್ಥೆಯ ಪ್ರತಿಯೊಬ್ಬರ ಸಹಭಾಗಿತ್ವ ಮತ್ತು ಉತ್ಸಾಹ ಭರಿತ ಕಾರ್ಯನಿರ್ವಹಣೆ ಅವರ್ಣನೀಯ. ಈ ಸಾಧನೆಗೆ ಕಳಸಪ್ರಾಯವಾಗಿ, ಸದಾ ಪ್ರೇರೇಪಿಸುತ್ತಾ, ಪ್ರೋತ್ಸಾಹಿಸುತ್ತಿರುವವರು ನಮ್ಮ ಗೌರವಾನ್ವಿತ ರಾಜ್ಯ ಮುಖ್ಯ ಆಯುಕ್ತರಾಗಿರುವ ಶ್ರೀ ಪಿ.ಜಿ.ಆರ್. ಸಿಂಧ್ಯರವರು. “Leader knows the Way, Shows the Way, Goes the Way” ಎಂಬಂತೆ ಈ ಎಲ್ಲಾ ಸಾಧನೆಗಳಲ್ಲಿ, ಅನುಷ್ಠಾನಗೊಳಿಸುವ ಕಾರ್ಯಗಳ ಬಗ್ಗೆ ಸ್ವತಃ ತಿಳಿದುಕೊಂಡಿದ್ದು, ಅದರಂತೆ ಕಾರ್ಯತತ್ಪರರಾಗುವಲ್ಲಿ ಎಲ್ಲರಿಗೂ ಸಕಾಲಿಕ, ಸಮರ್ಪಕ ಮಾರ್ಗದರ್ಶನವನ್ನು ನೀಡುತ್ತಾ, ತಾವು ಆ ಮಾರ್ಗದಲ್ಲಿ ಸಂಪೂರ್ಣ ತೊಡಗಿಸಿಕೊಳ್ಳುವಲ್ಲಿಯ ಇವರ ಸಮರ್ಥ ನಾಯಕತ್ವ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಯ ಎಲ್ಲಾ ಶ್ರೇಷ್ಠ ಮಟ್ಟದ ಸಾಧನೆಗಳಿಗೆ ಪ್ರೇರಕ ಮತ್ತು ಪೂರಕ ಎಂಬುದು ಸ್ಪಷ್ಟವಾಗಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವರೆಲ್ಲರಿಗೂ ಮನದಟ್ಟಾಗಿದೆ.

ಜೊತೆಗೆ ಮಾರ್ಚ್ 2024ರ ಅಂತ್ಯದ ದಿನಗಳಲ್ಲಿ ಹಾಗೂ ನಂತರ ಏಪ್ರಿಲ್ 2024ರಲ್ಲಿ ಅತ್ಯುತ್ಸಾಹದಿಂದ ಏರ್ಪಡಿಸಲಾಗುತ್ತಿರುವ ಬೇಸಿಗೆ ಶಿಬಿರಗಳ ನಿರ್ವಹಣೆ ಮತ್ತು ಅದರ ಸಮರ್ಪಕ ಅನುಷ್ಠಾನದಲ್ಲಿ ಎಲ್ಲಾ ಸ್ಥಳೀಯ, ಜಿಲ್ಲಾ ಪದಾಧಿಕಾರಿಗಳು, ದಳನಾಯಕರುಗಳ ಸಹಭಾಗಿತ್ವ ಹರ್ಷದಾಯಕ. ಈ ಬೇಸಿಗೆ ಶಿಬಿರಗಳ ಯಶಸ್ವಿ ನಿರ್ವಹಣೆಗೆ ಪೂರಕವಾಗುವಲ್ಲಿ, ಸಲಹೆ–ಸಹಕಾರ ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಪ್ರೇರಣೆ ನೀಡುವಲ್ಲಿ ರಾಜ್ಯ ಮುಖ್ಯ ಆಯುಕ್ತರು ಮಾಡುತ್ತಿರುವ ಪ್ರಯತ್ನಗಳು ಶ್ಲಾಘನೀಯ. ಈ ಹಿಂದಿನ ವರ್ಷಗಳ ಬೇಸಿಗೆ ಶಿಬಿರಗಳಂತೆ, 2023–24ರ ಮಾರ್ಚ್, ಏಪ್ರಿಲ್, ಮೇ 24ರಲ್ಲಿ ಏರ್ಪಡಲಿರುವ ಬೇಸಿಗೆ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಯ ಧ್ಯೇಯೋದ್ದೇಶಗಳನ್ನು ಅರ್ಥೈಸಿ, ಹೆಚ್ಚು–ಹೆಚ್ಚು ವಿದ್ಯಾರ್ಥಿಗಳು ಈ ಚಳವಳಿಯಲ್ಲಿ ಭಾಗವಹಿಸುವಲ್ಲಿ ಪ್ರೇರೇಪಣೆ ನೀಡುವಂತಾಗಲಿ ಮತ್ತು ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳು ಈ ಬೇಸಿಗೆ ಶಿಬಿರದ ಎಲ್ಲಾ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಮತ್ತು ನೈತಿಕ ಬೆಳವಣಿಗೆಗಳ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಉತ್ತೇಜಿತರಾಗುವಲ್ಲಿ ನಾವೆಲ್ಲರೂ ಹೆಚ್ಚು ಶ್ರಮಿಸೋಣ ಎಂದು ವಿನಂತಿಸುತ್ತೇನೆ.

ಮುಂಬರುವ 2024–25ನೇ ಶೈಕ್ಷಣಿಕ ವರ್ಷದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಎಲ್ಲಾ ಕಾರ್ಯಕ್ರಮಗಳು, ಚಟುವಟಿಕೆಗಳು, ತರಬೇತಿಗಳು ಇನ್ನೂ ಹೆಚ್ಚು–ಹೆಚ್ಚು ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗೆ ತಲುಪಿ, ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಸಕ್ರಿಯವಾಗಿ ಅನುಷ್ಠಾನಗೊಳಿಸುವಲ್ಲಿ ಕಾಯಾ, ವಾಚಾ, ಮನಸಾ ಶ್ರಮಿಸುವ ನಿರ್ಧಾರ ನಮ್ಮ–ನಿಮ್ಮಗಳದೆಲ್ಲಾ ಆಗಲಿ ಎಂದು ವಿನಮ್ರವಾಗಿ ಪ್ರಾರ್ಥಿಸುತ್ತೇನೆ.

2024–25ನೇ ಶೈಕ್ಷಣಿಕ ವರ್ಷಕ್ಕೆ ಸ್ಕೌಟ್–ಗೈಡ್ ಶುಭ ಹಾರೈಕೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# 2023-24ನೇ ಸಾಲಿನ ದ್ವಿತೀಯ ಪಿ.ಯು.ಸಿಯಲ್ಲಿ ಸಾಧನೆ ಮಾಡಿದ ಸ್ಕೌಟ್ಸ್-ಗೈಡ್ಸ್‌ಗಳು



**PRAGNA .N**
590/600 (Commerce)
Vijaya PU College, Mulkee
Dakshina Kannada



**DEEPTHI**
587/600 (Commerce)
Jain PU College, Mudubidire
Dakshina Kannada



**SWATHI .S**
584/600 (Commerce)
Alvas PU College, Mudubidire
Dakshina Kannada



**SANJANA**
584/600 (Commerce)
Alvas PU College, Mudubidire
Dakshina Kannada



**H. ARPEETA SHETTY**
584/600 (Commerce)
Vani PU College, Beltangadi
Dakshina Kannada



**CHINNU SANGAPPA UPPALADINNI**
584/600 (Science)
Shantinikethan Science PU College
Vijayapura



**SAMARTHA PRABHU**
583/600 (Science)
Jnanasuda P.U. College
Udupi



**SREENIDHI**
583/600 (Arts)
S.D.M. PU College, Ujire
Beltangadi, Dakshina Kannada



**ASHVEETHA SHEETY**
582/600 (Commerce)
Vani PU College, Beltangadi
Dakshina Kannada



**N. ATHITi**
582/600 (Science)
Jain PU College,Mudubidire
Dakshina Kannada



**KAVYASHREE**
579/600 (Commerce)
Vani PU College, Beltangadi
Dakshina Kannada



**K.H. TRUSHA**
578/600 (Commerce)
St. Phelomina PU College
Puttur, Dakshina Kannda



**SAPTHASREE**
577/600 (Commerce)
Jain PU College,Mudubidire
Dakshina Kannada



**Vismaya Pai**
576/600 (Commerce)
Jain PU College,Mudubidire
Dakshina Kannada



**HRUTIKA ANAND POOJARI**
575/600 (Commerce)
Vani PU College, Beltangadi
Dakshina Kannada



**PRAGNA K**
573/600 (Commerce)
St. Phelomina PU College
Puttur, Dakshina Kannda



**B. SNEHA**
568/600 (Science)
Jain PU College,Mudubidire
Dakshina Kannada

ಇವರುಗಳಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯಿಂದ ತುಂಬು ಹೃದಯದ ಅಭಿನಂದನೆಗಳು

# Heartly Congratulations



## Mr. Madhusudan Avala

Additional International Commissioner (S)
Bharat Scouts & Guides, India

**Is Appointed by the WOSM As Vice Chair Person of 43rd World Scout Conference Scheduled to be held at Egypt from 17th to 23rd August 2024.**

## ಮೇ ತಿಂಗಳಲ್ಲಿ ಏರ್ಪಡಿಸಿರುವ ರಾಜ್ಯ ಸಂಸ್ಥೆಯ ವಿವಿಧ ಸಮಿತಿಗಳ ಸಭೆಯ ವಿವರಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ/ ಸಮಯ | ಸ್ಥಳ |
|---|---|---|---|
| 1. | ಡಾ॥ ಆನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಶಿಬಿರ ಕೇಂದ್ರದ ಅಭಿವೃದ್ಧಿ ಸಮಿತಿ ಸಭೆ | 08.05.2024<br>ಬುಧವಾರ, 11.00 A.M | ದೊಡ್ಡಬಳ್ಳಾಪುರ |
| 2. | ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ಶಿಬಿರ ಕೇಂದ್ರದ ಅಭಿವೃದ್ಧಿ ಸಮಿತಿ ಸಭೆ | 09.05.2024<br>ಗುರುವಾರ, 11.30 A.M | ಕೊಂಡಜ್ಜಿ |
| 3. | ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಕಟಣೆಗಳ ಸಮಿತಿ ಮತ್ತು ಮಾಸಪತ್ರಿಕೆ ಸಂಪಾದಕ ಮಂಡಳಿ ಸಭೆ | 11.05.2024<br>ಶನಿವಾರ, 11.00 A.M | ರಾಜ್ಯ ಕೇಂದ್ರ ಕಛೇರಿ |
| 4. | ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಟ್ರಸ್ಟ್ ಸಮಿತಿ ಸಭೆ | 11.05.2024<br>ಶನಿವಾರ, 12.30 A.M | ರಾಜ್ಯ ಕೇಂದ್ರ ಕಛೇರಿ |
| 5. | ಶಾಂತಿಗೃಹ ಶಿಬಿರದ ಅಭಿವೃದ್ಧಿ ಸಮಿತಿ ಸಭೆ | 13.05.2024<br>ಸೋಮವಾರ, 04.30 A.M | ರಾಜ್ಯ ಕೇಂದ್ರ ಕಛೇರಿ |
| 6. | ರಾಜ್ಯ ತರಬೇತಿ ಸಮಿತಿ ಸಭೆ | 14.05.2024<br>ಮಂಗಳವಾರ, 11.00 A.M | ರಾಜ್ಯ ಕೇಂದ್ರ ಕಛೇರಿ |
| 7. | ವಯಸ್ಕ ನಾಯಕ ಅಭಿವೃದ್ಧಿ ಸಂಪನ್ಮೂಲ ಸಮಿತಿ ಸಭೆ | 14.05.2024<br>ಮಂಗಳವಾರ, 03.00 A.M | ರಾಜ್ಯ ಕೇಂದ್ರ ಕಛೇರಿ |
| 8. | ರಾಜ್ಯ ಕಾರ್ಯಕ್ರಮಗಳ ಸಮಿತಿ ಸಭೆ | 15.05.2024<br>ಬುಧವಾರ, 11.00 A.M | ರಾಜ್ಯ ಕೇಂದ್ರ ಕಛೇರಿ |
| 9. | ರಾಜ್ಯ ಹಣಕಾಸು ಸಮಿತಿ ಸಭೆ | 16.05.2024<br>ಗುರುವಾರ, 11.00 A.M | ರಾಜ್ಯ ಕೇಂದ್ರ ಕಛೇರಿ |
| 10. | ರಾಜ್ಯ ಕಾರ್ಯಕಾರಿ ಸಮಿತಿ ಸಭೆ | 23.05.2024<br>ಗುರುವಾರ, 11.00 A.M | ರಾಜ್ಯ ಕೇಂದ್ರ ಕಛೇರಿ |


Sharada Group of Institutions Mangalore
Sharada
GROUP OF INSTITUTIONS
MANGALURU
www.sharadagroup.in
Institution that prepare you for career & life
31 Years
A TRADITION OF EXCELLENCE
KODIALBAIL CAMPUS :
➢ SHARADA VIDYALAYA (CBSE) ✆ 901970479
➢ SHARADA PRE-UNIVERSITY COLLEGE ✆ 7483817602
SHUBHODAYA VIDYALAYA
MOODUSHEDDE CAMPUS :
➢ SHARADA SHUBHODAYA VIDYALAYA (CBSE) ✆ 9743154851
TALAPADY CAMPUS :
➢ SHARADA VIDYANIKETHANA PUBLIC SCHOOL (CBSE)
➢ SHARADA VIDYANIKETHANA PRE-UNIVERSITY COLLEGE
➢ SHARADA COLLEGE (Degree) ✆ 7022437688
AYURDHAMA CAMPUS
➢ SHARADA AYURVEDA MEDICAL COLLEGE & HOSPITAL ✆ 6363147355
➢ SHARADA YOGA & NATUROPATHY MEDICAL COLLEGE & HOSPITAL ✆ 6363926599
THE BHARATH SCOUTS & GUIDES
SHARADA VIDYALAYA SAFARI PARK

# BALAVIKAS
## ENGLISH MEDIUM SCHOOL

Balavikas is not merely a School, It is an Educational Vision

VIDYANAGAR PERAJE, MANI

A Unit of: **BALAVIKAS TRUST (R.)**

SINCE 1989

34 Years of Educational Expertise

**First DIGITAL CAMPUS of Coastal Karnataka**

**NURSERY, LKG, UKG , CLASS 1ST TO 10TH**




Scan for a glimpse into our World

Balavikas English Medium School

Vidyanagar Peraje, Mani, Bantwal TQ, D.K - 574 253

Ph: 0824-6666687 | Mob: +91 99022 26466












# ಜಿಲ್ಲಾ ವಾರ್ತೆಗಳು



## ಬಾಗಲಕೋಟೆ

* ಏಪ್ರಿಲ್ 3 ರಂದು ಮುಧೋಳ ತಾಲ್ಲೂಕಿನ ಢವಳೇಶ್ವರ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ ಢವಳನಾಥ ಅನುದಾನಿತ ಶಾಲೆ ಹಾಗೂ ಸರ್ಕಾರಿ ಪ್ರೌಢಶಾಲೆಗಳ ಮಕ್ಕಳ ಬೇಸಿಗೆ ಶಿಬಿರಕ್ಕೆ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಶ್ರೀ ಹೆಚ್.ಎಸ್. ಭಜಂತ್ರಿ ಚಾಲನೆ ನೀಡಿ ಮಾತನಾಡಿದರು. ಢವಳನಾಥ ಶಾಲೆ ಮುಖ್ಯ ಶಿಕ್ಷಕ ಶ್ರೀ ಕೆ.ಜಿ. ನೇಗಿನಹಾಲ, ಗೈಡ್ ಕ್ಯಾಪ್ಟನ್ ಶ್ರೀಮತಿ ಶಶಿಕಲಾ ಬೆನಕಟ್ಟಿ, ಸ್ಕೌಟ್ ಮಾಸ್ಟರ್ ಶ್ರೀ ಸಿ.ವಿ. ದಾದನಟ್ಟಿ, ಶ್ರೀ ಡಿ.ಎಂ. ಮಹಾಜನ, ಶ್ರೀ ಎ.ಬಿ. ಚೌರಡ್ಡಿ, ಶಿಕ್ಷಕಿ ಭಾಗ್ಯಶ್ರೀ ಇದ್ದರು. 68 ಸ್ಕೌಟ್ ವಿದ್ಯಾರ್ಥಿಗಳು, 32 ಗೈಡ್ಸ್ ವಿದ್ಯಾರ್ಥಿನಿಯರು ಶಿಬಿರದಲ್ಲಿ ಭಾಗವಹಿಸಿದ್ದರು.



* ಮುಧೋಳ ತಾಲ್ಲೂಕಿನ ಸಮೀರವಾಡಿಯ ಕೆ.ಜೆ. ಸೋಮಯ್ಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏಪ್ರಿಲ್ 5 ರಂದು ಬೇಸಿಗೆ ಶಿಬಿರವನ್ನು ಪ್ರಾರಂಭಿಸಲಾಯಿತು. ಹೊರಸಂಚಾರ, ಶಿಬಿರಾಗ್ನಿ ಹಾಗೂ ಸರ್ವಧರ್ಮ ಪ್ರಾರ್ಥನೆ ನಡೆಸಲಾಯಿತು.

## ಬೆಳಗಾವಿ

* ಮಾರ್ಚ್ 25 ರಂದು ಚಿಕ್ಕೋಡಿ ತಾಲ್ಲೂಕಿನ ಕೆ.ಎಚ್.ಪಿ.ಎಸ್. ಕುಂಗಟೋಳಿ ಇಲ್ಲಿ ಗೈಡ್ ತಂಡದ ಬೇಸಿಗೆ ಶಿಬಿರವು ಬೆಡನ್ ಪೋವೆಲ್‌ರವರ ಭಾವಚಿತ್ರಕ್ಕೆ ಪೂಜೆ ಹಾಗೂ ದೀಪ ಪ್ರಜ್ವಲನೆಯೊಂದಿಗೆ ಪ್ರಾರಂಭವಾಯಿತು.



ಕಾರ್ಯಕ್ರಮದಲ್ಲಿ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಬಸವರಾಜ ನೇಜ, ಜಿಲ್ಲಾ ಸಂಘಟನಾ ಶಿಕ್ಷಕ ಶ್ರೀ ಎನ್.ಜಿ. ಪಾಟೀಲ, ಶ್ರೀ ಆರ್.ಎಸ್. ತಳವಾರ, ಕಬ್ ಮಾಸ್ಟರ್, ಕೆ.ಎಲ್.ಪಿ. ಹೊನ್ನಗುಡ್ಡಲಕ್ಷ್ಮೀ, ಶ್ರೀ ಸಂತೋಷ ಡೊಣೆ, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ ಶ್ರೀಮತಿ ರೂಪಾ ನಾಯಕ, ಪ್ರಧಾನ ಗುರುಗಳಾದ ಶ್ರೀ ಪ್ರಭಾಕರ ಮಜಲಟ್ಟಿ, ಎ.ಎಸ್.ಓ.ಸಿ.ಡಿ.ಬಿ. ಅತ್ತಾರ ಶಾಲೆಯ ಗುರುಮಾತೆಯರು ಉಪಸ್ಥಿತರಿದ್ದರು. 50ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು.

## ಬೆಂಗಳೂರು ದಕ್ಷಿಣ

ಏಪ್ರಿಲ್ ತಿಂಗಳನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಎಲ್ಲಾ ಸ್ಥಳಿಯ ಸಂಸ್ಥೆಯವಾರು ದಳಗಳ ಮಟ್ಟದಲ್ಲಿಕಬ್ಸ್-ಬುಲ್ ಬುಲ್ ಸ್ಕೌಟ್ಸ್-ಗೈಡ್ ಹಾಗೂ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆಯನ್ನು ಮಾಡಲಾಗಿತ್ತು. ದಳ ಮಟ್ಟದಲ್ಲಿ ಹೂರ ಸಂಚಾರವನ್ನು ಹಮ್ಮಿಕೊಳ್ಳಲಾಯಿತು. ಬೇಸಿಗೆ ಶಿಬಿರ ಕೊನೆಯ ದಿನದಂದು ಸರ್ವಧರ್ಮ ಪ್ರಾರ್ಥನೆಯೊಂದಿಗೆ ಶಿಬಿರವನ್ನು ಮುಕ್ತಯಗೊಳಿಸಲಾಯಿತ್ತು. ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಪಧಾದಿಕಾರಿಗಳು ಬೇಸಿಗೆ ಶಿಬಿರಕ್ಕೆ ಭೇಟಿ ನೀಡಿ ಮಕ್ಕಳಿಗೆ ಶುಭ ಕೋರಿದರು.



* ಬೆಂಗಳೂರು ದಕ್ಷಿಣ ಜಿಲ್ಲೆಯ ವಿಜಯನಗರ ಸ್ಥಳೀಯ ಸಂಸ್ಥೆಯ ನ್ಯೂ ಕೇಂಬ್ರಿಡ್ಜ್ ಮತ್ತು ಸೆಂಟ್ ಜೋಫಿನ್ ಶಾಲೆಯಲ್ಲಿ ಏಪ್ರಿಲ್ 14 ರಂದು "SAVE WATER SAVE BENGALURU" ಘೋಷವಾಕ್ಯದೊಂದಿಗೆ ಶ್ರೀ ಟಿ. ಸಿದ್ದಗಂಗಯ್ಯ,



ವಿಜಯನಗರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳ ನಾಯತ್ವದಲ್ಲಿ ಜಾಥವನ್ನು ಆಯೋಜಿಸಲಾಯಿತ್ತು.

* ಏಪ್ರಿಲ್ 13 ರಿಂದ 15ರ ವರಗೆ ವೈಟ್‌ಫೀಲ್ಡ್ ಸ್ಥಳೀಯ ಸಂಸ್ಥೆಯ ರೇಯನ್ ಅಂತರಾಷ್ಟ್ರೀಯ ಶಾಲೆಯ ವತಿಯಿಂದ ದೂಡ್ಡಬಳ್ಳಾಪುರ ತರಬೇತಿ ಕೇಂದ್ರದಲ್ಲಿ ವಾರ್ಷಿಕ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರದಲ್ಲಿ ಕಬ್ ಬುಲ್-ಬುಲ್, ಸ್ಕೌಟ್ಸ್-ಗೈಡ್ಸ್ ದಳನಾಯಕರುಗಳು ಭಾಗವಹಿಸಿದರು.



* ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ ಏಪ್ರಿಲ್ 17 ರಿಂದ 21ರ ವರಗೆ ಡಾ॥ ಅನಿಬೆಸೆಂಟ್ ಪಾರ್ಕ್, ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2023-24ನೇ ಸಾಲಿನ ತೃತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವ ಸಿದ್ದತಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಶಿಬಿರದ ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ತೃತೀಯ ಸೋಪಾನ ಸ್ಕೌಟ್ಸ್ ವಿಭಾಕ್ಕೆ ಶ್ರೀ ಸಿದ್ದಗಂಗಯ್ಯ ಪ್ರೀ ಎ.ಎಲ್.ಟಿ. (ಸ್ಕೌ) ನಾಯಕರಾಗಿದ್ದರು. ಗೈಡ್ಸ್ ವಿಭಾಗಕ್ಕೆ ಶ್ರೀಮತಿ ಮಮತ ನಾಯಕರಾಗಿದ್ದರು. ರಾಜ್ಯ ಪುರಸ್ಕಾರ ಪೊರ್ವ ಸಿದ್ಧತಾ ಶಿಬಿರಕ್ಕೆ ಶ್ರೀ ಚನ್ನಪ್ಪ ನಾಯಕರಾಗಿದ್ದರು. ಶ್ರೀಮತಿ ವಿಕ್ಟೋರಿಯಾ ಅಮಲರಾಣಿ, ಎ.ಎಲ್.ಟಿ.(ಗೈ) ವಿಭಾಗಕ್ಕೆ ನಾಯಕಿಯಾಗಿದ್ದರು. ಶ್ರೀ ಟಿ.ಕೆ. ನಾರಾಯಣ ಸ್ವಾಮಿ ಎಲ್.ಟಿ.(ಸ್ಕೌ) ಶಿಬಿರದ ನಿರ್ದೇಶಕರಾಗಿದ್ದರು. ಶಿಬಿರಕ್ಕೆ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಭೇಟಿ ನೀಡಿದರು. ಶ್ರೀ ಎ.ಎಸ್ ಮದುಸೂದನ್ ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಖಜಾಂಚಿ, ಶ್ರೀ ಬಿ. ಎಸ್. ಅನಂತ್, ಜಿಲ್ಲಾ ಸಹಾಯಕ ಕಾರ್ಯದರ್ಶಿ, ದಳನಾಯಕ-ನಾಯಕಿಯರು, ಸ್ಕೌಟ್ಟ್-ಗೈಡ್ಸ್‌ಗಳು, ಸೇವಾ ರೋವರ್ಸ್-ರೇಂಜರ್ಸ್ ಶಿಬಿರದಲ್ಲಿ ಭಾಗವಹಿಸಿದರು.

* ಏಪ್ರಿಲ್ 15 ರಿಂದ 22ರ ವರಗೆ ಡಾ॥ ಅನಿಬೆಸೆಂಟ್ ಪಾರ್ಕ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಸ್ಕೌಟ್ಟ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್, ಕಬ್ಬ್ ಮಾಸ್ಟರ್, ಫ್ಲಾಕ್ ಲೀಡರ್ ಮೂಲ ಮತ್ತು ಮುಂದುವರೆದ ತರಬೇತಿ ಒಟ್ಟು 8 ತರಬೇತಿ ಶಿಬಿರಗಳನ್ನು ಆಯೋಜನೆ ಮಾಡಲಾಯಿತು. 175 ಶಿಬಿರಾರ್ಥಿಗಳು ಭಾಗವಹಿಸಿದರು.

ಸ್ಕೌಟ್ಸ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ಟಿ.ಕೆ. ನಾರಾಯಣಸ್ವಾಮಿ ಎಲ್.ಟಿ.(ಸ್ಕೌ) ಶಿಬಿರದ ನಾಯಕರಾಗಿದರು, 34 ಶಿಬಿರಾರ್ಥಿಗಳು ಭಾಗವಹಿಸಿದರು. ಗೈಡ್ಸ್ ಕ್ಯಾಪ್ಟನ್ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ಗಾಯತ್ರಿ ಜಿ ಎ.ಎಲ್.ಟಿ (ಗೈ) ಶಿಬಿರದ ನಾಯಕಿಯಾಗಿದ್ದರು. 25 ಶಿಬಿರಾರ್ಥಿಗಳು ಭಾಗವಹಿಸಿದರು.

ಫ್ಲಾಕ್ ಲೀಡರ್ ಮೂಲತರಬೇತಿ ಶಿಬಿರಕ್ಕೆ ಶ್ರೀಮತಿ ಎ. ಮೇರಿ ಫಿಲೋಮಿನಾ, ಎಲ್.ಟಿ (ಫ್ಲಾಕ್) ಶಿಬಿರದ ನಾಯಕಿಯಾಗಿದ್ದರು. 26 ಶಿಬಿರಾರ್ಥಿಗಳು ಭಾಗವಹಿಸಿದರು.

ಕಬ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ಮುನಿನಾರಾಯಣಪ್ಪ ಎಲ್.ಟಿ(ಕಬ್) ಶಿಬಿರದ ನಾಯಕರಾಗಿದ್ದರು. 17 ಶಿಬಿರಾರ್ಥಿಗಳು ಭಾಗವಹಿಸಿದರು. ಸ್ಕೌಟ್ಸ್ ಮಾಸ್ಟರ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀ ಎಂ ವಿ ಜನಾರ್ಧನ್, ಎಲ್.ಟಿ (ಸ್ಕೌ) ಶಿಬಿರದ ನಾಯಕರಾಗಿದ್ದರು. 17 ಶಿಬಿರಾರ್ಥಿಗಳು ಭಾಗವಹಿಸದರು.

ಗೈಡ್ಸ್ ಕ್ಯಾಪ್ಟನ್ ಮೂಲತರಬೇತಿ ಶಿಬಿರಕ್ಕೆ ಶ್ರೀಮತಿ ರೇಖಾ ಎ.ಎಲ್.ಟಿ (ಗೈ) ಶಿಬಿರದ ನಾಯಕಿಯಾಗಿದ್ದರು. 24 ಶಿಬಿರಾರ್ಥಿಗಳು ಭಾಗವಹಿಸಿದರು. ಫ್ಲಾಕ್ ಲೀಡರ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀಮತಿ ಗೌರಬಾಯಿ ಎಲ್.ಟಿ(ಫ್ಲಾ) ಶಿಬಿರದ ನಾಯಕಿಯಾಗಿದ್ದರು. 11 ಶಿಬಿರಾರ್ಥಿಗಳು ಭಾಗವಹಿಸಿದರು.

ಕಬ್ ಮಾಸ್ಟರ್ ಮುಂದುವರದ ತರಬೇತಿ ಶಿಬಿರಕ್ಕೆ ಶ್ರೀಮತಿ ಸಂದ್ಯಾರಾಣಿ ಎಲ್.ಟಿ(ಕಬ್) ಶಿಬಿರದ ನಾಯಕಯಾಗಿದ್ದರು. 15 ಶಿಬಿರಾರ್ಥಿಗಳು ಭಾಗವಹಿಸಿದರು. ಏಪ್ರಿಲ್ 19 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಶಿಬಿರಕ್ಕೆ ಭೇಟಿ ನೀಡಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಎಸ್. ಮದುಸೂದನ್, ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಖಜಾಂಚಿ, 157 ಶಿಬಿರಾರ್ಥಿಗಳು ಮತ್ತು ಸೇವಾ ರೋವರ್ಸ್-ರೇಂಜರಸ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.



## ಅಭಿನಂದನೆಗಳು



**ಡಾ॥ ಗೌತಮ್ ಜಿ.** ಹಿರಿಯ ರೋವರ್ ಹಾಗೂ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಸ್ಕೌಟ್ಸ್ ಗೈಡ್ಸ್ ನೋಡಲ್ ಅಧಿಕಾರಿ ಇವರು ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ 939ನೇ ರ‍್ಯಾಂಕ್ ಗಳಿಸಿದ್ದಾರೆ ಮತ್ತು ಜಿಲ್ಲೆಗೆ ಕೀರ್ತಿಯನ್ನು ತಂದಿರುತ್ತಾರೆ. ಶ್ರೀಯುತರು, ಡಯಟ್‌ನ ಹಿರಿಯ ಉಪನ್ಯಾಸಕರು ಶ್ರೀ ಜಿ.ಎಂ. ಗಂಗಪ್ಪ ಮತ್ತು ಶ್ರೀಮತಿ ಜಯಲಲಕ್ಷ್ಮೀರವರ ದ್ವಿತೀಯ ಪುತ್ರರು.

## ಬೆಂಗಳೂರು ಉತ್ತರ

* ಬೆಂಗಳೂರು ಉತ್ತರ ಜಿಲ್ಲೆ ಹಾಗೂ ಚಾಮುಂಡಿ ಮುಕ್ತದಳದ ಜಂಟಿ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಅಗ್ರಗಾಮಿ ಪ್ರಾವಿಣ್ಯತಾ ಪದಕದ ತರಬೇತಿಯನ್ನು ಏಪ್ರಿಲ್ 07 ರಂದು ಚಾಮುಂಡಿ ಮುಕ್ತದಳದ ಆವರಣದಲ್ಲಿ ನಡೆಸಲಾಯಿತು. ಶಿಬಿರದ ಉದ್ಘಾಟನೆಯನ್ನು ಚಾಮುಂಡಿ ಮುಕ್ತದಳದ ನಾಯಕರಾದ ಶ್ರೀ ನರಸಿಂಹಮೂರ್ತಿ ನೇರೆವೇರಿಸಿದರು. ಶಿಬಿರದಲ್ಲಿ ಭಾಗವಹಿಸಿದ ಎಲ್ಲರನ್ನೂ ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿರವರು ಸ್ವಾಗತಿಸಿದರು. ಜಿಲ್ಲಾ ಸ್ಕೌಟ್ಸ್ ಆಯುಕ್ತರಾದ ಶ್ರೀ ಹೇಮಂತ್ ಕುಮಾರ್ ಶಿಬಿರದ ನಾಯಕತ್ವ ವಹಿಸಿದ್ದರು.



* ಬೆಂಗಳೂರು ಉತ್ತರ ಜಿಲ್ಲೆಯ 2024-25 ಸಾಲಿನ ಜಿಲ್ಲಾ ಮಟ್ಟದ ತೃತೀಯ ಸೋಪಾನ ಪರೀಕ್ಷಾ ಶಿಬಿರ ರೋವರ್-ರೇಂಜರ್ ನಿಪುಣ್ ಪರೀಕ್ಷಾ ಶಿಬಿರ ಹಾಗೂ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳ ರಾಜ್ಯ ಪುರಸ್ಕಾರ ತರಬೇತಿ ಶಿಬಿರವನ್ನು ಏಪ್ರಿಲ್ 12 ರಿಂದ 14ರ ವರೆಗೆ ರಾಜ್ಯ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರ ಇಲ್ಲಿ ಆಯೋಜಿಸಲಾಯಿತು. ತೃತೀಯ ಸೋಪಾನ್ ಪರೀಕ್ಷಾ ಶಿಬಿರದ ನಾಯಕರಾಗಿ ಶ್ರೀ ಆನಂದ ಅಡಿಗ, ನಿಪುಣ್ ಪರೀಕ್ಷಾ ಶಿಬಿರದ ಆಯುಕ್ತರಾಗಿ ಶ್ರೀ ವಿತೇಶ್ ಕಾಂಚನ್, ರೇಂಜರ್ ವಿಭಾಗದ ನಾಯಕರಾಗಿ ಕುಮಾರಿ ಸಿಂಧು ಹಾಗೂ ರಾಜ್ಯ ಪುರಸ್ಕಾರ ಪೂರ್ವ ಸಿದ್ದತಾ ಶಿಬಿರದ ನಾಯಕರಾಗಿ ಶ್ರೀ ಮೋಹನ್, ಶ್ರೀಮತಿ ಪೂರ್ಣಿಮ ಕಾರ್ಯನಿರ್ವಹಿಸಿದರು. ಶಿಬಿರದ ಸಮಯದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪ್ರಸನ್ನಕುಮಾರ್, ಜಿಲ್ಲಾ ಸ್ಕೌಟ್ಸ್ ಆಯುಕ್ತರಾದ ಶ್ರೀ ಹೇಮಂತ್ ಕುಮಾರ್ ಭಾಗವಹಿಸಿ ಸ್ಕೌಟಿಂಗ್ ಗುಣಮಟ್ಟ ಹೆಚಿಸಲು ಕರೆ ನೀಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಶಿಬಿರವನ್ನು ಸಂಘಟಿಸಿದರು.



* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಸ್ಕೌಟ್ಸ್-ಗೈಡ್ಸ್ ನಡಿಗೆ ಹಳ್ಳಿ ಕಡೆಗೆ ಎಂಬ ಸಮುದಾಯ ಸೇವಾ ಕಾರ್ಯಕ್ರಮ ದಡಿಯಲ್ಲಿ ಮಾರ್ಚ್ 22 ರಂದು ಗಂಟಿಗಾನಹಳ್ಳಿ ಯಲಹಂಕ ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಚಗೊಳಿಸಲಾಯಿತು ಗಂಟಿಗಾನಗಾಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು.

* ಮಾರ್ಚ್ 25 ರಂದು ಗಂಟಿಗಾನಹಳ್ಳಿಯಲ್ಲಿ 2024ರ ಲೋಕಸಭಾ ಚುನಾವಣೆಯ ಪ್ರಯುಕ್ತ ಮತದಾನ ಬಗ್ಗೆ ಜನ ಜಾಗೃತಿ ಜಾಥಾ ಹಾಗೂ ಪ್ರತಿಜ್ಞಾ ವಿಧಿಯನ್ನು ರೋವರ್-ರೇಂಜರ್ ವತಿಯಿಂದ ಮಾಡಲಾಯಿತು ಮತ್ತು ಹಳ್ಳಿಯ ಜನರಿಗೆ ಚುನಾವಣೆಯ ಮಹತ್ವವನ್ನು ತಿಳಿಸಲಾಯಿತು. ಪಿ.ಡಿ.ಓ. ಶ್ರೀ ಪೂಣಚ್ಚ ಇವರ ಮಾರ್ಗರ್ಶನದಲ್ಲಿ ಕಾರ್ಯಕ್ರಮ ನೇರೆವೇರಿತು.



* ಏಪ್ರಿಲ್ 08 ರಂದು ವಿದ್ಯಾ ಮಂದಿರ ಶಾಲೆ, ಮಲ್ಲೇಶ್ವರ ಇಲ್ಲಿನ ಸ್ಕೌಟ್ಸ್-ಗೈಡ್ಸ್‌ಗಳಿಂದ ಸೈಕಲ್ ಜಾಥಾವನ್ನು ಮಲ್ಲೇಶ್ವರಂ ಮುಖ್ಯ ರಸ್ತೆಗಳಲ್ಲಿ ಮಾಡಲಾಯಿತು. ಜಾಥಾಕ್ಕೆ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಜ್ಯೋತಿ ರಂಗನಾಥ್ ಇವರು ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಶಾಲಾ ಸ್ಕೌಟ್ಸ್ ಶಿಕ್ಷಕರಾದ ಶ್ರೀ ಚಂದ್ರಶೇಖರ್, ಶ್ರೀಮತಿ ಲತಾ, ಶ್ರೀರಾಜು ಹಾಗೂ ಶ್ರೀಮತಿ ಶಾರದ ಇವರು ಭಾಗವಹಿದರು.




* ಬೆಂಗಳೂರು ಉತ್ತರ ಜಿಲ್ಲೆಯಿಂದ ಚಿನ್ಮಯಿ ಸ್ಕೂಲ್ ಬಾಣಸವಾಡಿ. ಶ್ರೀ ವಿದ್ಯಾ ಮಂದಿರ ಶಾಲೆ ಮಲ್ಲೇಶ್ವರ, ಶ್ರೀ ಅಯ್ಯಪ್ಪ ಎಜುಕೇಶನ್ ಸೆಂಟರ್, ಸಂತೋಷನಗರ, ಆರ್.ಟಿ. ನಗರ ಸ್ಕೂಲ್, ಕ್ಲೂನಿ ಹೈಸ್ಕೂಲ್, ಶ್ರೀ ಅಯ್ಯಪ್ಪ ಎಜುಕೇಶನ್ ಸೆಂಟರ್ ಅಬ್ಬಿಕೆರೆ, ಡೆಪೋಡಿಲ್ಸ್ ಸ್ಕೂಲ್. ಡೆಪೋಡೇಲ್ಸ್ ಲಾರ್ನಿಗ್ ಸ್ಕೂಲ್ ಹೆಬ್ಬಾಳ, ಎಸ್.ಜಿ.ಆರ್. ಪಬ್ಲಿಕ್ ಸ್ಕೂಲ್ ರಾಜಾಜಿನಗರ, ಸ್ಟೆಲ್ಲಾಮೇರಿಸ್, ಇಂಟರ್ ನ್ಯಾಶನಲ್ ಸ್ಕೂಲ್, ಸ್ಟ್ಯಾಂಡರ್ಡ್ ಪಬ್ಲಿಕ್ ಸ್ಕೂಲ್ ಈ ಶಾಲೆಗಳಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಯಿತು.



* ಯಲಹಂಕ ಸ್ಥಳೀಯ ಸಂಸ್ಥೆಯ ವಿಡಿಯಾ ಪೂರ್ಣಪ್ರಜ್ಞಾ ಶಾಲೆ ನಾಗಸಂದ್ರ ಇವರ ವಾರ್ಷಿಕ ಹಾಗೂ ಬೇಸಿಗೆ ಶಿಬಿರವನ್ನು ಮಾರ್ಚ್ 29 ಮತ್ತು 30 ರಂದು ಅನ್ನಿಬೆಸೆಂಟ್ ರಾಜ್ಯ ತರಬೇತಿ ಕೇಂದ್ರ ದೊಡ್ಡಬಳ್ಳಾಪುರದಲ್ಲಿ ನಡೆಸಲಾಯಿತು. ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಮೋಹನ್ ಕುಮಾರ್ ಹಾಗೂ ಸ್ಕೌಟ್ಸ್ ಮಾಸ್ಟರ್, ಶ್ರೀ ಸುಬಾಷ್ ಇವರು ಸಹಕರಿಸಿದರು. ಶಾಲಾ ಪ್ರಾಂಶುಪಾಲರಾದ ಶ್ರೀ ಶ್ರೀಧರ್ ಇವರು ಶಿಬಿರಕ್ಕೆ ಚಾಲನೆ ನೀಡಿದರು. ಶಾಲಾ ಮುಖ್ಯ ಶಿಕ್ಷಕಿಯಾದ ಶ್ರೀಮತಿ ಭುವನೇಶ್ವರಿ ಇವರು ಶಿಬಿರದಲ್ಲಿ ಭಾಗವಹಿಸಿದ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರ ಇಂತಹ ಶಿಬಿರವನ್ನು ಎಲ್ಲಾ ಶಾಲೆಗಳು ಸಂಘಟಿಸುವಂತೆ ಕರೆನೀಡಿದರು.

## ಬೆಂಗಳೂರು ಪೂರ್ವ

* ಮಾರ್ಚ್ 25 ರಿಂದ 04ರ ವರೆಗೆ 2023-24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಗಳು ನಡೆದವು. ಆನೇಕಲ್ ತಾಲ್ಲೂಕಿನ 20 ಪರೀಕ್ಷಾ ಕೇಂದ್ರಗಳಲ್ಲಿಯೂ ಒಟ್ಟು ಸುಮಾರು 180 ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್, ಸ್ಕೌಟರ್ ಹಾಗೂ ಗೈಡರ್‌ಗಳು ಸೇವೆ ಸಲ್ಲಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಜೆ.ಎಂ. ಜಯಲಕ್ಷ್ಮಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್ ಸೇರಿದಂತೆ ಶಿಕ್ಷಣ ಇಲಾಖೆಯ ಅನೇಕ ಅಧಿಕಾರಿಗಳು ಇವರ ಸೇವೆಯನ್ನು ಶ್ಲಾಘಿಸಿದರು.

* ಮಾರ್ಚ್ 18 ರಂದು ಆನೇಕಲ್‌ನ ಗುರುಭವನದಲ್ಲಿ 2022-23ನೇ ಸಾಲಿನ ರಾಜ್ಯ ಪುರಸ್ಕಾರ ಪ್ರಶಸ್ತಿ ಪುರಸ್ಕೃತ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ಚತುರ್ಥ ಚರಣ್ ಕಬ್ಸ್, ಹೀರಕ್ ಪಂಕ್ ಬುಲ್ ಬುಲ್‌ಗಳಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸುವ ಸಮಾರಂಭವನ್ನು ಏರ್ಪಡಿಸಲಾಗಿತ್ತು. ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ) ಶ್ರೀ ಚಿನ್ನಸ್ವಾಮಿ ರೆಡ್ಡಿ ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್, ಜಿಲ್ಲಾ ಸಹ ಕಾರ್ಯದರ್ಶಿ ಶ್ರೀ ಜಿ. ನಾಗರಾಜು, ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕಿ ಶ್ರೀಮತಿ ನೇತ್ರಾವತಿ, ಕ್ಷೇತ್ರ ಸಮನ್ವಯಾಧಿಕಾರಿ ಶ್ರೀ ಭಾಸ್ಕರ್ ಮೊದಲಾದವರು ಉಪಸ್ಥಿತರಿದ್ದರು.



ಇದೇ ಸಂದರ್ಭದಲ್ಲಿ ನೂತನವಾಗಿ ತರಬೇತಿ ಪಡೆದ ಸ್ಕೌಟರ್, ಗೈಡರ್‌ಗಳಿಗೆ ವಾರೆಂಟ್ ಹಾಗೂ ಚಾರ್ಟರ್‌ಗಳನ್ನು ವಿತರಿಸಲಾಯಿತು.

* ಏಪ್ರಿಲ್ 01 ರಿಂದ 03ರ ವರೆಗೆ ಬ್ಯಾಗಡದೇನಹಳ್ಳಿ ಕ್ಲಸ್ಟರ್ ವ್ಯಾಪ್ತಿಯ ಜೀನಿಯಸ್ ಅಕಾಡೆಮಿ (ಚೆಸ್ಟನ್ ಸ್ಕೂಲ್) ಇಲ್ಲಿ ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ಹಾಗೂ ತೃತೀಯ ಸೋಪಾನ ಸ್ಕೌಟ್ಸ್, ಗೈಡ್ಸ್, ಮತ್ತು ನಿಪುಣ್ ರೋವರ್ಸ್ ಮತ್ತು ರೇಂಜರ್‌ಗಳ ಪರೀಕ್ಷಾ ಪೂರ್ವ ಸಿದ್ಧತಾ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿತ್ತು. ಶಿಬಿರದಲ್ಲಿ ವಿವಿಧ ಶಾಲಾ ಕಾಲೇಜುಗಳ 157 ಸ್ಕೌಟ್ಸ್, 128 ಗೈಡ್ಸ್, 25 ರೋವರ್ಸ್ ಮತ್ತು 35 ರೇಂಜರ್ಸ್ ಒಟ್ಟು 345 ಜನ ಭಾಗವಹಿಸಿ ತರಬೇತಿಯನ್ನು ಪೂರೈಸಿದರು. ಕಿತ್ತಗಾನಹಳ್ಳಿಯ



ಬಿ.ಎಸ್. ಕಾರ್ಮೆಲ್ ಶಾಲೆಯ ಸ್ಕೌಟ್ ಮಾಸ್ಟರ್ ಶ್ರೀ ಆರ್. ಅರುಣ್ ತೃತೀಯ ಸೋಪಾನ ತರಬೇತಿ ಶಿಬಿರದ ನಾಯಕರಾಗಿಯೂ ಜಿಲ್ಲಾ ತರಬೇತಿ ಆಯುಕ್ತ ಶ್ರೀ ಆರ್. ಮುನಿರಾಜು ರಾಜ್ಯ ಪುರಸ್ಕಾರತರಬೇತಿ ಶಿಬಿರದ ನಾಯಕರಾಗಿ ಕಾರ್ಯ ನಿರ್ವಹಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್ ಶಿಬಿರದ ಮೇಲುಸ್ತುವಾರಿ ವಹಿಸಿದ್ದರು.

* ಏಪ್ರಿಲ್ 06 ಹಾಗೂ 07 ರಂದು ಹುಸ್ಕೂರಿನಲ್ಲಿ ನಡೆದ ಐತಿಹಾಸಿಕ ಜಾತ್ರಾ ಮಹೋತ್ಸವದಲ್ಲಿ ಹೆಬ್ಬಗೋಡಿಯ ಎಸ್.ಎಫ್.ಎಸ್. ಕಾಲೇಜಿನ ಸುಮಾರು 75 ರೋವರ್ಸ್, ರೇಂಜರ್‌ಗಳು ರೋವರ್ ಸ್ಕೌಟ್ ಲೀಡರ್ ಶ್ರೀ ಆರ್. ಸಂಪತ್ ಕುಮಾರ್ ನೇತೃತ್ವದಲ್ಲಿಸೇವೆ ಸಲ್ಲಿಸಿದರು.

## ಚಾಮರಾಜನಗರ

* ಮಾರ್ಚ್ 06 ರಿಂದ 10ರ ವರೆಗೆ ಮಹಾಶಿವರಾತ್ರಿ ಪ್ರಯುಕ್ತ ಚಾಮರಾಜನಗರ ಜಿಲ್ಲೆಯ ಶ್ರೀ ಮಲೆಮಹದೇಶ್ವರ ಬೆಟ್ಟದಲ್ಲಿ ಸೇವೆಯನ್ನು ಸಲ್ಲಿಸಲಾಯಿತು. ಈ ಸೇವಾ ಶಿಬಿರದಲ್ಲಿ ಒಟ್ಟು 150ಕ್ಕೂ ಹೆಚ್ಚು ರೋವರ್ಸ್ ರೇಂಜರ್ಸ್‌ಗಳು ಭಾಗವಹಿಸಿದರು. ಈ ಸೇವಾ ಶಿಬಿರದಲ್ಲಿ ಶ್ರೀ ಅಶೋಕ್ ಕುಮಾರ್ ಕೆ ಪಿ, ಜಿಲ್ಲಾ ಸಂಘಟಕರು ನಾಯಕತ್ವದಲ್ಲಿ ಚಾಮರಾಜನಗರ ಜಿಲ್ಲೆಯ ರೋವರ್ಸ್ ಮತ್ತು ರೇಂಜರ್ಸ್ ಗಳು ಕರ್ತವ್ಯ ನಿರ್ವಹಿಸಿದರು.



* 2024-25ನೇ ಸಾಲಿನ ಬೇಸಿಗೆ ಶಿಬಿರವನ್ನು ಚಾಮರಾಜನಗರ ಜಿಲ್ಲೆಯ 5 ತಾಲೂಕು ಹಾಗೂ ವಿವಿಧ ಶಾಲೆಗಳಲ್ಲಿ ಆರಂಭಿಸಲಾಗಿದೆ ಈ ಶಿಬಿರದಲ್ಲಿ ಅತಿಥಿಗಳಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗ್ರಾಮ ಪಂಚಾಯಿತಿಯ ಅಭಿವೃದ್ಧಿ



ಅಧಿಕಾರಿಗಳು, ಗ್ರಾಮದ ಮುಖ್ಯಸ್ಥರು, ಶಾಲೆಯ ಮುಖ್ಯ ಶಿಕ್ಷಕರು ಮತ್ತು ದಳ ನಾಯಕ ನಾಯಕಿಯರು ಉಪಸ್ಥಿತರಿದ್ದು ಮಕ್ಕಳಿಗೆ ಉತ್ಸಾಹದಾಯಕ ಹಿತನುಡಿಗಳನ್ನು ತಿಳಿಸಿದರು.

## ಚಿಕ್ಕಮಗಳೂರು

* ರಾಜ್ಯ ಮಟ್ಟದ ಪರಿಸರ ತಜ್ಞರ ಮೌಲ್ಯಮಾಪನ ಸಮಿತಿ ಅಧ್ಯಕ್ಷರಾಗಿ ನೇಮಿಸಲ್ಪಟ್ಟ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಮಹೇಶ್ ಅವರನ್ನು ಚಿಕ್ಕಮಗಳೂರು ಜಿಲ್ಲಾ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು.



* ಏಪ್ರಿಲ್ 4 ರಿಂದ 6ರ ವರೆಗೆ ಮೂಡಿಗೆರೆ ತಾಲೂಕಿನ ಸಂತ ಮಾರ್ಥಾಸ್ ಪ್ರೌಢ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಸುಮಾರು 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದರು. ವಿದ್ಯಾರ್ಥಿಗಳನ್ನು ಮೂಡಿಗೆರೆ ತಾಲೂಕಿನ ಬೀಜುವಳ್ಳಿ ಸಸ್ಯ ಕ್ಷೇತ್ರಕ್ಕೆ ಹೊರಸಂಚಾರ ಕರೆದುಕೊಂಡು ಹೋಗಿ ಆಧುನಿಕ ಕೃಷಿ ಬೆಳೆಗಳ ಬಗ್ಗೆ ಮಾಹಿತಿಯನ್ನು ನೀಡಿ ಕೃಷಿಯ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ಕೊನೆಯ ದಿನ ಹೊರ ಸಂಚಾರ ಕರೆದುಕೊಂಡು ಹೋಗಿ ವಿದ್ಯಾರ್ಥಿಗಳಿಂದ ಬೆಂಕಿ ಇಲ್ಲದೆ ಅಡುಗೆ ಮಾಡಿಸಿ ವಿವಿಧ ಚಟುವಟಿಕೆಗಳನ್ನು ಮಾಡಲಾಯಿತು.



* ಏಪ್ರಿಲ್ 2 ರಿಂದ 4ರ ವರೆಗೆ ಮೂಡಿಗೆರೆ ಬಿಜಿವಿಎಸ್ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು ಇದರಲ್ಲಿ ಸುಮಾರು 70ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದರು. ವಿದ್ಯಾರ್ಥಿಗಳನ್ನು ಮೂಡಿಗೆರೆ ಪಟ್ಟಣದ ಚಿಕ್ಕ ಹಳ್ಳಪ್ರದೇಶಕ್ಕೆ ಹೊರಸಂಚಾರ ಕರೆದುಕೊಂಡು ಹೋಗಿ ಆಧುನಿಕ ಕೃಷಿ ಬೆಳೆಗಳ ಬಗ್ಗೆ ಮಾಹಿತಿಯನ್ನು ನೀಡಿ ಕೃಷಿಯ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು



ಮೂಡಿಸಲಾಯಿತು ಕೊನೆಯ ದಿನ ಹೊರ ಸಂಚಾರ ಕರೆದು ಕೊಂಡು ಹೋಗಿ ವಿದ್ಯಾರ್ಥಿಗಳಿಂದ ಬೆಂಕಿ ಇಲ್ಲದೆ ಅಡುಗೆ ಮಾಡಿಸಿ ವಿವಿಧ ಚಟುವಟಿಕೆಗಳನ್ನು ಮಾಡಲಾಯಿತು.

* ಏಪ್ರಿಲ್ 3 ರಿಂದ 5ರ ವರೆಗೆ ಚಿಕ್ಕಮಗಳೂರು ತಾಲೂಕಿನ ಮಲಂದೂರು ಸರ್ಕಾರಿ ಪ್ರೌಢ ಶಾಲೆಯಲ್ಲಿ ಪ್ರೌಢ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಸುಮಾರು 30ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದರು. ವಿದ್ಯಾರ್ಥಿಗಳನ್ನು ತಾಲ್ಲೂಕಿನ ಭದ್ರಾ ಹುಲಿಸಂರಕ್ಷಿತ ಕ್ಷೇತ್ರಕ್ಕೆ ಹೊರ ಸಂಚಾರ ಕರೆದುಕೊಂಡು ಹೋಗಿ ವಿದ್ಯಾರ್ಥಿಗಳಿಗೆ ಮರ–ಗಿಡಗಳ ಮತ್ತು ಪ್ರಾಣಿಗಳ ಚಲನವಲನ ಆಹಾರ ಪದ್ಧತಿಗಳ ಬಗ್ಗೆ ಮಾಹಿತಿ ನೀಡಲಾಯಿತು ಹಾಗೂ ಆಧುನಿಕ ಕೃಷಿ ಬೆಳೆಗಳ ಬಗ್ಗೆ ಮಾಹಿತಿಯನ್ನು ನೀಡಿ ಕೃಷಿಯ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ಕೊನೆಯ ದಿನ ಹೊರ ಸಂಚಾರ ಕರೆದು ಕೊಂಡು ಹೋಗಿ ವಿದ್ಯಾರ್ಥಿಗಳಿಂದ ಗ್ರಾಮದ ವಿವಿಧ ಸ್ಥಳಗಳನ್ನು ಸ್ವಚ್ಛಗೊಳಿಸಿ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.

* ದಿನಾಂಕ 24 ರಂದು ಶ್ರೀ ಮಂಜುನಾಥೇಶ್ವರ ವಿದ್ಯಾ ಕೇಂದ್ರ ಹೌಸಿಂಗ್ ಬೋರ್ಡ್ ಚಿಕ್ಕಮಗಳೂರು ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು



ಆಯೋಜಿಸಲಾಗಿತ್ತು. ಶಿಬಿರದಲ್ಲಿ ಸುಮಾರು 70ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಶಿಬಿರದ ನಾಯಕತ್ವವನ್ನು ಶ್ರೀಮತಿ ಪಲ್ಲವಿ ಗೈಡ್ಸ್ ಕ್ಯಾಪ್ಟನ್ ಹಾಗೂ ಮಹಿಳಾ ಸ್ಕೌಟ್ ಶಿಕ್ಷಕರಾದ ಶ್ರೀಮತಿ ಗೀತಾರವರು ವಹಿಸಿದ್ದರು.

* ಸ್ಥಳೀಯ ಸಂಸ್ಥೆ ಶೃಂಗೇರಿಯಲ್ಲಿ ನಾಲ್ಕು ದಿನದ ಬೇಸಿಗೆ ಶಿಬಿರ ಮತ್ತು ಹೊರಸಂಚಾರದ ನಡೆಸಲಾಯಿತು. ಈ ಶಿಬಿರದಲ್ಲಿ ಒಟ್ಟು 46 ಸ್ಕೌಟ್ಸ್, 32 ಗೈಡ್ಸ್‌ಗಳು ಭಾಗವಹಿಸಿದ್ದರು. ಶಿಬಿರದ ನಾಯಕರಾಗಿ ಶ್ರೀ ಸುಬ್ರಹ್ಮಣ್ಯ ಎ.ಎಸ್. ಮತ್ತು ಶ್ರೀಮತಿ ರಾಜೇಶ್ವರಿ ಡಿ.ಎನ್. ನಿರ್ವಹಣೆ ಕಾರ್ಯವನ್ನು ಮಾಡಿರುತ್ತಾರೆ. ಈ ಸಮಾರಂಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ವಿನಯ್ ಸಿ.ಜಿ. ಸ್ಥಳೀಯ ಸಂಸ್ಥೆ ಉಪಾಧ್ಯಕ್ಷ ಶ್ರೀ ಹೆಚ್.ಎನ್. ವಿಶ್ವೇಶ್ವರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿರುತ್ತಾರೆ. ಈ ಕಾರ್ಯಕ್ರಮಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ರಾಘವೇಂದ್ರ, ಶ್ರೀಮಠದ ಅಧಿಕಾರಿಗಳಾದ ಶ್ರೀ ಗೋಪಾಲ ಕೃಷ್ಣಭಟ್ ಮತ್ತು ಶಾಲೆಯ ಶಿಕ್ಷಕರುಗಳು ಭಾಗವಹಿಸಿದ್ದರು. ನಂತರ ಸ್ವಚ್ಛತಾ ಕಾರ್ಯಕ್ರಮವನ್ನು ಮಾಡಿಸಲಾಯಿತು.



* ಮಾರ್ಚ್ 26 ರಿಂದ 31ರ ವರೆಗೆ ಚಿಕ್ಕಮಗಳೂರು ತಾಲೂಕಿನ ಸಂಜೀವಿನಿ ವಿದ್ಯಾ ಸಂಸ್ಥೆಯಲ್ಲಿ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಒಟ್ಟು ನೂರಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಈ ಶಿಬಿರದ ನಾಯಕರಾಗಿ ಶ್ರೀಮತಿ ಜ್ಯೋತಿ, ಹೆಚ್. ಡಬ್ಲ್ಯೂ.ಬಿ.ರವರು ವಹಿಸಿದ್ದರು. ಈ ಶಿಬಿರಕ್ಕೆ ಜಿಲ್ಲೆಯ ತರಬೇತಿ ಆಯುಕ್ತರಾದ ಶ್ರೀಮತಿ ಸಿ. ಸಂಧ್ಯಾ ರಾಣಿರವರು ಭೇಟಿ ನೀಡಿದರು.

## ಚಿಕ್ಕಬಳ್ಳಾಪುರ

* ಮಾರ್ಚ್ 15 ರಂದು ಲೋಕಸಭಾ ಚುನಾವಣೆ ಪ್ರಯುಕ್ತ ಜಿಲ್ಲಾ ಮತ್ತು ತಾಲ್ಲೂಕು ಸ್ವೀಪ್ ಸಮಿತಿ ಹಾಗೂ ತಾಲ್ಲೂಕು ಆಡಳಿತ ವತಿಯಿಂದ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ರವಿಕುಮಾರ್‌ರವರ ಅಧ್ಯಕ್ಷತೆಯಲ್ಲಿ ನಡೆದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಿಟಿಜನ್ ಶಾಲೆಯ ಗೈಡ್ಸ್‌ಗಳು ಸೇವೆಯನ್ನು ಸಲ್ಲಿಸಿದರು.

* ಮಾರ್ಚ್ 22 ರಂದು ಸ್ಥಳೀಯ ಸಂಸ್ಥೆ ಚಿಂತಾಮಣಿ ಹಾಗೂ ಶ್ರೀ ಪ್ರೀತಿ ವಿದ್ಯಾಮಂದಿರ ವತಿಯಿಂದ ವಿಶ್ವ ಜಲದಿನಾಚರಣೆ ಹಾಗೂ ಅರಣ್ಯ ದಿನದ ಪ್ರಯುಕ್ತ ಮನೆಗಳ ಮೇಲೆ ಪ್ರಾಣಿ ಪಕ್ಷಿಗಳಿಗೆ ನೀರು ಮತ್ತು ದಾನ್ಯಗಳು ಇಡುವ



ಕಾರ್ಯಕ್ರಮ ಮತ್ತು ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

* ಮಾರ್ಚ್ 23 ರಂದು "ಪೃಥ್ವಿಗಾಗಿ 1 ಗಂಟೆ" ಕಾರ್ಯಕ್ರಮದಲ್ಲಿ ಜಿಲ್ಲೆಯ ಕಬ್ಸ್, ಬುಲ್ ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್, ರೇಂಜರ್ಸ್, ವಿದ್ಯಾರ್ಥಿಗಳು ದಳ ನಾಯಕರುಗಳು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದರು.

* ಏಪ್ರಿಲ್ 05 ರಂದು ಜಿಲ್ಲಾ ಸಂಸ್ಥೆ ಚಿಕ್ಕಬಳ್ಳಾಪುರ, ಸ್ಥಳೀಯ ಸಂಸ್ಥೆ ಚಿಕ್ಕಬಳ್ಳಾಪುರ ಚಿಕ್ಕಬಳ್ಳಾಪುರ ತಾಲ್ಲೂಕು ಬಿ.ಜಿ.ಎಸ್ ವರ್ಲ್ಡ್ ಶಾಲೆ, ಚೆಲುವೆ ತಿಮ್ಮನಹಳ್ಳಿ, ಚಿಕ್ಕಬಳ್ಳಾಪುರ ಇಲ್ಲಿ ಬೇಸಿಗೆ ಶಿಬಿರದ 2 ನೇ ದಿನ ಪ್ರಾಂಶುಪಾಲರಾದ ಶ್ರೀಮತಿ ದೀಪಿಕಾ ಶರ್ಮ ರವರು ಸ್ಕೌಟ್ಸ್ ಮತ್ತು ಗೈಡ್ಸ್



ವಿದ್ಯಾರ್ಥಿಗಳನ್ನು ಹಾಗೂ ಕಾರ್ಯಕ್ರಮಗಳನ್ನು ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ನಾರಾಯಣಸ್ವಾಮಿ ಹಾಗೂ ಜಿಲ್ಲಾ ಸಂಘಟಕರಾದ ಶ್ರೀ ವಿಶ್ವನಾಥ .ವಿ ರವರು ಬೇಟಿ ನೀಡಿದರು.

* ಏಪ್ರಿಲ್ 05 ರಿಂದ 08ರ ವರೆಗೆ ಸರ್ಕಾರಿ ಪ್ರೌಢಶಾಲೆ, ಮೇಳ್ಯ ಗೌರಿಬಿದನೂರು ತಾಲ್ಲೂಕು ಇಲ್ಲಿ ಬೇಸಿಗೆ ಶಿಬಿರವನ್ನು ಸಂಘಟಿಸಲಾಗಿತು.

* ಏಪ್ರಿಲ್ 06 ರಿಂದ 14ರ ವರೆಗೆ ಅರುಣೋಧಯ ಶಾಲೆ ಬಾಗೇಪಲ್ಲಿ ಇಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಬೇಸಿಗೆ ಶಿಬಿರಗಳನ್ನು ಸಂಘಟಿಸಿಲಾಯಿತು.

* ಏಪ್ರಿಲ್ 05 ರಿಂದ 08ರ ವರೆಗೆ ಆದರ್ಶ ಶಾಲೆ, ಬಾಗೇಪಲ್ಲಿ ಇಲ್ಲಿ ಬೇಸಿಗೆ ಶಿಬಿರವನ್ನು ಸಂಘಟಿಸಲಾಗಿತು.

* ಏಪ್ರಿಲ್ 12 ರಂದು ತಾಲ್ಲೂಕು ಆಡಳಿತ ಮತ್ತು ತಾಲ್ಲೂಕು ಪಂಚಾಯತ್, ಗೌರಿಬಿದನೂರು, ತಾಲ್ಲೂಕು ಸ್ವೀಫ್ ಸಮಿತಿ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ ಸಹಯೋಗದಲ್ಲಿ ಮತದಾನದ ಅರಿವು ಕಾರ್ಯಕ್ರಮ ಸಂಘಟಿಸಲಾಗಿತ್ತು. ನಗರದ ವಿವಿಧ ರಸ್ತೆಗಳಲ್ಲಿ ಕಡ್ಡಾಯವಾಗಿ ಮತದಾನ ಮಾಡುವಂತೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ, ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಮತ್ತು ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



**ಮೇ ತಿಂಗಳ ಕಾರ್ಯಕ್ರಮಗಳು**

| | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1. | ಕಬ್ ಮಾಸ್ಟರ್, ಸ್ಕೌಟ್ಸ್ ಮಾಸ್ಟರ್, ಫ್ಲಾಕ್ ಲೀಡರ್, ಗೈಡ್ ಕ್ಯಾಪ್ಟನ್‌ಗಳಿಗೆ ಮೂಲತರಬೇತಿ ಹಾಗು ಮುಂದುವರೆದ ತರಬೇತಿ ಶಿಬಿರ | 13 ರಿಂದ 19 ಮೇ 2024 | ಬೆಂಗಳೂರು ಉತ್ತರ ಜಿಲ್ಲಾ ಸಂಸ್ಥೆಯಿಂದ(ಡಾ. ಆನಿಬೆಸೆಂಟ್ ರಾಜ್ಯ ತರಬೇತಿ ಕೇಂದ್ರ ದೊಡ್ಡಬಳ್ಳಾಪುರ) |
| 2. | ಕಬ್ ಮಾಸ್ಟರ್, ಸ್ಕೌಟ್ಸ್ ಮಾಸ್ಟರ್, ಫ್ಲಾಕ್ ಲೀಡರ್, ಗೈಡ್ ಕ್ಯಾಪ್ಟನ್‌ಗಳಿಗೆ ಮೂಲತರಬೇತಿ | 18 ರಿಂದ 24 ಮೇ 2024 | ಉಡುಪಿ ಜಿಲ್ಲಾ ಸಂಸ್ಥೆಯಿಂದ (ಡಾ. ವಿ.ಎಸ್. ಆಚಾರ್ಯ ಜಿಲ್ಲಾ ತರಬೇತಿ ಕೇಂದ್ರ, ಉಡುಪಿ) |
| 3. | ಕಬ್ ಮಾಸ್ಟರ್, ಸ್ಕೌಟ್ಸ್ ಮಾಸ್ಟರ್, ಫ್ಲಾಕ್ ಲೀಡರ್, ಗೈಡ್ ಕ್ಯಾಪ್ಟನ್‌ಗಳಿಗೆ ಮುಂದುವರೆದ ತರಬೇತಿ ಶಿಬಿರ | 20 ರಿಂದ 26 ಮೇ 2024 | ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯಿಂದ (ಜಿಲ್ಲಾ ತರಬೇತಿ ಕೇಂದ್ರ, ಪಿಳಿಕುಲ, ಮಂಗಳೂರು) |
| 4. | ರಾಜ್ಯ ಪುರಸ್ಕಾರ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮೇ 30, 2024 | | |
| 5. | ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಹಾಗೂ ಶಿಕ್ಷಕರು OYMS ನಲ್ಲಿ ನೊಂದಾಯಿಸಿ UID ಪಡೆಯಲು ಕೊನೆಯ ದಿನಾಂಕ ಮೇ 31, 2024 | | |

## ದಾವಣಗೆರೆ

* ಮಾರ್ಚ್ 14 ರಿಂದ 16ರ ವರೆಗೆ ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಜೈನ್ ವಿದ್ಯಾಲಯ ಶಾಲೆಯಲ್ಲಿ ಜೈನ್ ಟಮ್ಕೋಲದ 250 ಕ್ಕೂ ಹೆಚ್ಚು ಬನ್ನೀಸ್ ಮಕ್ಕಳು ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದರು.




* ಮಾರ್ಚ್ 21 ರಂದು ಹೊನ್ನಾಳಿ ಸ್ಥಳೀಯ ಸಂಸ್ಥೆ ವತಿಯಿಂದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಗುರುಭವನ ಹೊನ್ನಾಳಿ ಇಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಓ.ವೈ.ಎಂ.ಎಸ್. ನೋಂದಣಿ ಕಾರ್ಯವನ್ನು ನಡೆಸಲಾಯಿತು. ಶ್ರೀಮತಿ ಭೂದೇವಿ ಸಾಲಿಮಠ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಮತ್ತು ಸ್ಕೌಟರ್ ಗೈಡರ್‌ಗಳು ಶಿಬಿರದಲ್ಲಿ ಭಾಗವಹಿಸಿದ್ದರು.



* ಮಾರ್ಚ್ 27 ರಿಂದ 29ರ ವರೆಗೆ ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಅಮೃತ ವಿದ್ಯಾಲಯ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಶಾರದಾ ಮಾಗನಹಳ್ಳಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ಅಶ್ವಿನಿ ಜೆ., ಎಸ್.ಜೆ.ವಿ ಸ್ಥಳೀಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಕುಲಕರ್ಣಿ, ಖಜಾಂಚಿಗಳಾದ ಶ್ರೀ ಬಿ.ಎನ್. ರವಿಯುವರು ಭಾಗವಹಿಸಿದ್ದರು. ಶ್ರೀ ಕುಮಾರಸ್ವಾಮಿ ಕಬ್ ಮಾಸ್ಟರ್ ಶಿಬಿರದ ನೇತೃತ್ವವನ್ನು ವಹಿಸಿದ್ದರು.




* ಏಪ್ರಿಲ್ 01 ರಿಂದ 08ರ ವರೆಗೆ ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ನೇತಾಜಿ ಓಪನ್ ಸ್ಕೌಟ್ ಗ್ರೂಪ್ ಮತ್ತು ಚೇತನ ಗೈಡ್ ಗ್ರೂಪ್ ವತಿಯಿಂದ ಬಾಪೂಜಿ ಶಾಲೆಯ ಆವರಣದಲ್ಲಿ ಬೇಸಿಗೆ ಶಿಬಿರ ಆಯೋಜಿಸಲಾಗಿತ್ತು. ಸುಮಾರು 200ಕ್ಕೂ ಹೆಚ್ಚು ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಶಿಬಿರದಲ್ಲಿ ಭಾಗವಹಿಸಿ ಹಲವಾರು ವಿಷಯಗಳನ್ನು ತಿಳಿದುಕೊಂಡರು.

* ಏಪ್ರಿಲ್ 05 ರಂದು ಹರಿಹರ ಸ್ಥಳೀಯ ಸಂಸ್ಥೆ ಸಹಯೋಗದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಶ್ರೀ ಸುರೇಶ್ ಜಿ.ಎಸ್ ರೋವರ್ ಸ್ಕೌಟ್ ಲೀಡರ್ ರವರ ಮಾರ್ಗದರ್ಶನದಲ್ಲಿ ಶ್ರೀ ವಿಜಯ್‌ಕುಮಾರ್ ರವರ ನಾಯಕತ್ವದಲ್ಲಿ ತುಂಗಭದ್ರ ನದಿಯ ಸ್ವಚ್ಛತಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಬೆಳಗ್ಗೆ 7.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಎದುರಿನ ತೀರದಲ್ಲಿ ಸ್ವಚ್ಛಗೊಳಿಸಿದರು. ಈ ಸಂದರ್ಭದಲ್ಲಿ ಡಾ ದಾಕ್ಷಾಯಿಣಿ, ಡಾ ಗೌರಮ್ಮ ರೇಂಜರ್ ಲೀಡರ್ಸ್, ಶ್ರೀ ಪ್ರಭಾಕರ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀ ಎನ್.ಕೆ. ಕೊಟ್ರೇಶ್ ಜಿಲ್ಲಾ ಸಹಾಯಕ ಆಯುಕ್ತರು, ಶ್ರೀಮತಿ ಅಶ್ವಿನಿ ಜೆ., ಎಸ್.ಜೆ.ವಿ ಭಾಗವಹಿಸಿದ್ದರು.



* ಏಪ್ರಿಲ್ 11 ರಿಂದ 13ರ ವರೆಗೆ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ, ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ಜಿಲ್ಲಾ ಪುರಸ್ಕಾರ, ರಾಜ್ಯ ಪುರಸ್ಕಾರ ಪದಕ ತರಬೇತಿ ಶಿಬಿರ, ಪ್ರಕೃತಿ ಅಧ್ಯಯನ ಮತ್ತು ಬೇಸಿಗೆ ಶಿಬಿರವನ್ನು ಆಯೋಜಿಲಾಗಿತ್ತು. ಈ ಶಿಬಿರದಲ್ಲಿ 53 ಸ್ಕೌಟ್ಸ್ 33 ಗೈಡ್ಸ್‌ಗಳು ಶ್ರೀ ತರಳಬಾಳು ಜಗದ್ಗುರು ವಸತಿಯತ ಶಾಲೆ, ಬಾಪೂಜಿ ವಿದ್ಯಾ ಸಂಸ್ಥೆ, ಮಾಗನೂರು ಬಸಪ್ಪ ಶಾಲೆ, ಅನ್‌ಮೋಲ್ ಪಬ್ಲಿಕ್ ಶಾಲೆ, ಬಾಪೂಜಿ ಓಪನ್ ಸ್ಕೌಟ್ ಟ್ರೂಪ್ ಮತ್ತು ಮದರ್ ತೆರೆಸಾ ಓಪನ್ ಗೈಡ್ ಕಂಪನಿ ವತಿಯಿಂದ ಭಾಗವಹಿಸಿದ್ದರು. ಶಿಬಿರದ ನೇತೃತ್ವವನ್ನು ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ರವೀಂದ್ರಸ್ವಾಮಿ ಟಿ.ಎಂ ವಹಿಸಿದ್ದರು. ಶ್ರೀಮತಿ ಆರ್. ಸುಖವಾಣಿ ಜಿಲ್ಲಾ ಸಹ ಕಾರ್ಯದರ್ಶಿಗಳು ಜಿಲ್ಲಾ ಸಂಸ್ಥೆ ವತಿಯಿಂದ ಭಾಗವಹಿಸಿದ್ದರು.



* ಏಪ್ರಿಲ್ 12 ರಿಂದ 16ರ ವರೆಗೆ ದಾವಣಗೆರೆ ದಕ್ಷಿಣ ಸ್ಥಳೀಯ ಸಂಸ್ಥೆಯ ನೇತಾಜಿ ಓಪನ್ ಗ್ರೂಪ್ ಮತ್ತು ಚೇತನ ಗೈಡ್ ಗ್ರೂಪ್ ವತಿಯಿಂದ ಮಡಿಕೇರಿಯಲ್ಲಿ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರವನ್ನು ಆಯೋಜಿಸಲಾಗಿತ್ತು. ಶ್ರೀ ಜೆ.ಎಸ್. ವಿಜಯ್ ಸ್ಕೌಟ್ ಮಾಸ್ಟರ್ ಶಿಬಿರದ ನೇತೃತ್ವವನ್ನು ವಹಿಸಿದ್ದರು.

* ಏಪ್ರಿಲ್ 14 ರಂದು ಜಿಲ್ಲಾ ಸಂಸ್ಥೆಯಲ್ಲಿ ಅಂಬೇಡ್ಕರ್ ಜಯಂತಿಯನ್ನು ಅಂಬೇಡ್ಕರ್ ಭಾವಚಿತ್ರಕ್ಕೆ ಹೂ ಸಮರ್ಪಿಸುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಎ.ಪಿ. ಷಡಾಕ್ಷರಪ್ಪ, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಹಾಗೂ ಯುವ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

## ಹಾಸನ

* ಹೊಳೆನರಸೀಪುರ ಪಟ್ಟಣದ ಸೋಶಿಯಲ್ ಕ್ಲಬ್‌ನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಕ್ಲಬ್ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗೆ ಆಯೋಜಿಸಿದ ಉಚಿತ ಬೇಸಿಗೆ ಶಿಬಿರವನ್ನು ಸೋಶಿಯಲ್ ಕ್ಲಬ್ ಅಧ್ಯಕ್ಷ ಶ್ರೀ ಕೆ.ಎಂ. ಹೊನ್ನಪ್ಪನವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ನಂತರ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು "ಸಂಘ ಸಂಸ್ಥೆಗಳು ಸಾಮಾಜಿಕ ಕಾಳಜಿಯಿಂದ ಮಕ್ಕಳ ಸರ್ವತೋಮುಖ ಬೆಳೆಣಿಗೆಗೆ ಬೇಸಿಗೆ ಶಿಬಿರವನ್ನು ಹಮ್ಮಿಕೊಂಡಿರುವುದು ಪ್ರಶಂಸನೀಯ" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಿದ ತಾಲ್ಲೂಕು ಕಾರ್ಯದರ್ಶಿ ಶ್ರೀಮತಿ ಆರ್. ಕುಮುದ ಅವರು ಮಾತನಾಡಿದರು. 70ಕ್ಕೂ ಹೆಚ್ಚು ಮಕ್ಕಳು ಶಿಬಿರದಲ್ಲಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಹಾಸನ ಜಿಲ್ಲಾ ಸ್ಕೌಟ್ಸ್-ಗೈಡ್ಸ್ ಆಯುಕ್ತರಾದ ಶ್ರೀ ವೀರಭದ್ರಪ್ಪ, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರುಜೀ ಇನ್ನಿತರರು ಉಪಸ್ಥಿತರಿದ್ದರು.




* ಬೇಲೂರು ತಾಲ್ಲೂಕಿನ ಮೌಂಟ್ ಕಾರ್ಮಲ್ ಶಾಲೆಯಲ್ಲಿ ಏಪ್ರಿಲ್ 06 ರಿಂದ 08ರ ವರೆಗೆ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್-ಗೈಡ್‌ಗಳಿಗೆ ಬೇಸಿಗೆ ಶಿಬಿರವನ್ನು ಮಾಡಲಾಯಿತು. ಶಿಬಿರದ ನೇತೃತ್ವವನ್ನು ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್‌ಗಳಾದ ಶ್ರೀ ಶ್ವೇತ ನಾಯ್ಕ, ಶ್ರೀಮತಿ ಕಾಂತಮಣಿ, ವಹಿಸಿಕೊಂಡಿದ್ದರು. ಮುಖ್ಯೋಪಾಧ್ಯಾಯರಾದ ಶ್ರೀ ಪ್ರಕಾಶ್ ಫಿಂಟೋರವರು ಉತ್ತಮ ಸಹಕಾರವನ್ನು ನೀಡಿದರು.



* ಏಪ್ರಿಲ್ 5 ರಿಂದ 8ರ ವರೆಗೆ ಸರ್ಕಾರಿ ಪ್ರೌಢಶಾಲೆ ಮುರುಂಡಿ, ಅರಸೀಕೆರೆ ತಾಲ್ಲೂಕು ಇಲ್ಲಿನ ಪ್ರೇರಣಾ ಸ್ಕೌಟ್ ಮತ್ತು ಗೈಡ್ ಘಟಕದ ವತಿಯಿಂದ




ನಡೆಸಲಾಗುತ್ತಿರುವ ಬೇಸಿಗೆ ಶಿಬಿರವನ್ನು ಅರಸೀಕೆರೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಎನ್. ಸುರೇಶ್‌ರವರು ಉದ್ಘಾಟಿಸುವುದರೊಂದಿಗೆ ಬೇಸಿಗೆ ಶಿಬಿರದ ಮಹತ್ವವನ್ನು ತಿಳಿಸಿ, ಎಲ್ಲಾ ಮಕ್ಕಳು ಇದರ ಸದುಪಯೋಗವನ್ನು ಪಡೆದುಕೊಳ್ಳಲು ತಿಳಿಸಿದರು. ಕನ್ನಡ ಭಾಷಾ ಶಿಕ್ಷಕರಾದ ಶ್ರೀಮತಿ ಕವಿತಾರವರು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ಕಾತ್ಯಾಯಿನಿಯವರು ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ವೈವಿಧ್ಯಮಯ ಚಟುವಟಿಕೆಗಳನ್ನು ಆಯೋಜಿಸಿ ನಡೆಸಿಕೊಟ್ಟರು. ಇದರೊಂದಿಗೆ ಸಕಾರಾತ್ಮಕ ಚಿಂತನೆ ಉತ್ತಮ ಬದುಕಿಗೆ ಪ್ರೇರಣೆ ಎಂಬ ವಿಷಯದ ಕುರಿತಾಗಿ ಶ್ರೀ ಕೆ.ಸಿ. ನಟರಾಜ್ ಅವರಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

* "ಜೀವನದಲ್ಲಿ ಮೌಲ್ಯಗಳಿದ್ದಾಗಲೇ ಆ ಜೀವನ ಸಾರ್ಥಕವೆನಿಸುತ್ತದೆ. ಸಕಲಜೀವಿಗಳಲ್ಲಿ ಮನುಷ್ಯ ಮಾತ್ರ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಾಧ್ಯ. ಪಶು-ಪ್ರಾಣಿ-ಪಕ್ಷಿ-ಸಸ್ಯ ಈ ಜೀವಿಗಳಲ್ಲಿ ಜೀವವಿರುತ್ತದೆಯೇ ಹೊರತು, ಜೀವನ ಮೌಲ್ಯಗಳಿರುವುದಿಲ್ಲ. ಆ ಕಾರಣಕ್ಕಾಗಿಯೇ ಮನುಷ್ಯ ಬುದ್ಧಿಜೀವಿಯಾಗಲು ಸಾಧ್ಯ" ಎಂದು ಜಿಲ್ಲಾ ಮುಖ್ಯ ಆಯುಕ್ತ ಡಾ॥ ವೈ.ಎಸ್.ವೀರಭದ್ರಪ್ಪ ಅಭಿಪ್ರಾಯಪಟ್ಟರು. ಅವರು ಆಲೂರು ತಾಲ್ಲೂಕು ಸ್ಥಳೀಯ ಸಂಸ್ಥೆ ವತಿಯಿಂದ ಕಣತೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೂರು ದಿನಗಳ ಕಾಲ ಹಮ್ಮಿಕೊಂಡಿರುವ ಬೇಸಿಗೆ ಶಿಬಿರದಲ್ಲಿ ಜೀವನ ಮೌಲ್ಯಗಳ ಬಗ್ಗೆ ಮಾತನಾಡಿದರು. ಈ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಶ್ರೀಮತಿ ಎಚ್.ಜಿ. ಕಾಂಚನಮಾಲ, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಸೇರಿದಂತೆ ಸ್ಕೌಟ್ಸ್-ಗೈಡ್ಸ್‌ಗಳು ಹಾಜರಿದ್ದರು.




* ಚನ್ನರಾಯಪಟ್ಟಣ ತಾಲ್ಲೂಕು ಸಂಸ್ಥೆಯ ವತಿಯಿಂದ ತಾಲ್ಲೂಕು ಮಟ್ಟದ ಬೇಸಿಗೆ ಶಿಬಿರವನ್ನು ಕರ್ನಾಟಕ ಭವನದಲ್ಲಿ ಏಪ್ರಿಲ್ 13 ರಿಂದ 15ರ ವರಗೆ ಆಯೋಜನೆ ಮಾಡಲಾಯಿತು. ಮುಕ್ತಾಯ ಸಮಾರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಮನೋರಂಜನೆ ಕ್ರೀಡೆಗಳನ್ನು ಆಟ ಆಡಿಸಿ ನಾಯಕತ್ವಗುಣಗಳನ್ನು ಬೆಳೆಸುವುದರ ಬಗ್ಗೆ ತರಗತಿಯನ್ನು ನೀಡಿದರು.

* ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಚನ್ನರಾಯಪಟ್ಟಣ ತಾಲ್ಲೂಕಿನ ರೋವರ್ಸ್ ರೇಂಜರ್ಸ್‌ಗಳಿಗೆ ವಿಪತ್ತು ನಿರ್ವಹಣ ತರಬೇತಿಯನ್ನು ನೀಡಲಾಯಿತು. ಕಲ್ಯಾಣಿಗಳ ಸ್ವಚ್ಛತೆ ಕಾರ್ಯ, ಐತಿಹಾಸಿಕ ಸ್ಥಳವಾದ ನುಗ್ಗೆಹಳ್ಳಿಯ ದೇವಾಸ್ಥನದ ಸ್ವಚ್ಛತೆ, ರೈಲ್ವೆ ನಿಲ್ದಾಣದಲ್ಲಿ ನೀರು ವಿತರಣಾ ಸೇವೆ ಹಾಗೂ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಮಂಜುನಾಥ್, ರೋವರ್ ಸ್ಕೌಟ್ ಲೀಡರ್ ಶ್ರೀ ಪ್ರವೀಣ್, ರೇಂಜರ್ ಲೀಡರ್ ಶ್ರೀ ನಿರೋಶ ರವರ ಮಾರ್ಗದರ್ಶನದಲ್ಲಿ ಮಾಡಲಾಯಿತು.




* ಪಯೋನಿರಿಂಗ್ ಪಬ್ಲಿಕ್ ಶಾಲೆಯಲ್ಲಿ ಅಂಬೇಡ್ಕರ್ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂಧರ್ಭದಲ್ಲಿ ರಾಜ್ಯಪುರಸ್ಕಾರ್ ಪರೀಕ್ಷೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ರಾಜ್ಯಪುರಸ್ಕಾರ್ ಪ್ರಮಾಣ ಪತ್ರಗಳನ್ನು ವಿತರಣೆ ಮಾಡಲಾಯಿತು.

* ಸಂತ ಫಿಲೋಮಿನ ಹಿರಿಯ ಪ್ರಾಥಮಿಕ ಶಾಲೆಯ ಗೈಡ್ ಮತ್ತು ಬುಲ್ ಬುಲ್‌ಗಳಿಗೆ ಬೇಸಿಗೆ ಶಿಬಿರವನ್ನು ಏಪ್ರಿಲ್ 1 ರಿಂದ 5ರ ವರಗೆ ಶಾಲಾ ಆವರಣದಲ್ಲಿ ಆಯೋಜನೆ ಮಾಡಲಾಯಿತು. ಶಿಬಿರದ ನಾಯಕತ್ವವನ್ನು ಫ್ಲಾಕ್ ಲೀಡರ್ ಶ್ರೀಮತಿ ಕನ್ಯಾಕುಮಾರಿ ವಹಿಸಿದ್ದರು. ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಭೇಟಿ ನೀಡಿ ಶುಭ ಕೋರಿದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬೈರಪುರ ಇಲ್ಲಿನ ಕಬ್-ಬುಲ್‌ಬುಲ್‌ಗಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶ್ರೀಮತಿ ಎಲಿಜಾಬೇತ್‌ರವರು ನಾಯಕತ್ವ ವಹಿಸಿಕೊಂಡಿದ್ದರು.



* ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಕಬ್ಬಳಿಗೆರೆ ಅರಕಲಗೂಡು ತಾಲ್ಲೂಕಿನಲ್ಲಿ ಬೇಸಿಗೆ ಶಿಬಿರವನ್ನು ಏಪ್ರಿಲ್ 1 ರಿಂದ 7ರ ವರಗೆ ಆಯೋಜನೆ ಮಾಡಿ ರಾಜ್ಯಪುರಸ್ಕಾರ ವಿಷಯಗಳ ಕುರಿತು ತರಬೇತಿಯನ್ನು ನೀಡಲಾಯಿತು. ಶಿಬಿರದ ನಾಯಕತ್ವವನ್ನು ಗೈಡ್ ಶಿಕ್ಷಕಿ ಶ್ರೀಮತಿ ದಿವ್ಯ ವಹಿಸಿಕೊಂಡಿದ್ದರು.

* ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಾಣಾವರ ಅರಸೀಕೆರೆ ತಾಲ್ಲೂಕಿನ ಸ್ಕೌಟ್ ಮತ್ತು ಗೈಡ್ಸ್‌ಗಳಿಗೆ ಏಪ್ರಿಲ್ 4 ರಿಂದ 8ರ ವರಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಿರುತ್ತಾರೆ ಶಿಬಿರದ ನಾಯಕತ್ವವನ್ನು ಸ್ಕೌಟ್ ಮಾಸ್ಟರ್ ಶ್ರೀ ಸತೀಶ್‌ರವರು ವಹಿಸಿಕೊಂಡಿರುತ್ತಾರೆ.

* ಎಸ್.ಜಿ.ಆರ್ ಪಬ್ಲಿಕ್ ಶಾಲೆ, ಹಳೆಬೀಡು ಬೇಲೂರು ತಾಲ್ಲೂಕಿನ ಸ್ಕೌಟ್ಸ್ ಗೈಡ್ಸ್, ಕಬ್-ಬುಲ್‌ಬುಲ್ಸ್‌ಗಳಿಗೆ ಬೇಸಿಗೆ ಶಿಬಿರವನ್ನು ಏಪ್ರಿಲ್ 4 ರಿಂದ 8ರ ವರಗೆ ಆಯೋಜನೆ ಮಾಡಲಾಯಿತು. ಶಿಬಿರಾದ ನಾಯಕಿಯಾಗಿ ಶ್ರೀಮತಿ ಬಿ.ಎಲ್. ಮಮತಾ ಕಾರ್ಯನಿರ್ವಹಿಸಿರುತ್ತಾರೆ.

## ಕೊಡಗು

* ಮಾರ್ಚ್ 25 ರಿಂದ 27ರ ವರೆಗೆ ಕುಶಾಲನಗರ ಸ್ಥಳೀಯ ಸಂಸ್ಥೆಯ ಸರಕಾರಿ ಪ್ರಥಮ ದರ್ಜೆ ಕಾಲೇಜು ರೋವರ್ಸ್-ರೇಂಜರ್ಸ್ ಬೇಸಿಗೆ ಶಿಬಿರದ ಉದ್ಘಾಟನೆಯನ್ನು ಮಾಡಲಾಯಿತು. ಜಿಲ್ಲಾ ಸ್ಕೌಟ್ಸ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರಾ, ಜಿಲ್ಲಾ ಸಹಾಯಕ ಗೈಡ್ ಆಯುಕ್ತರಾದ ಶ್ರೀಮತಿ ಸುಲೋಚನ ಮತ್ತು ಜಿಲ್ಲಾ ಸಂಘಟಕರಾದ ಶ್ರೀಮತಿ ಯು.ಸಿ. ದಯುಮಂತಿಯವರು ಇದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿಮ್ಯಾಥ್ಯು ಅವರು ನೆರವೇರಿಸಿದರು.




* ಎಸ್.ಎಂ.ಎಸ್. ವಿದ್ಯಾ ಸಂಸ್ಥೆಯಲ್ಲಿ ನಡೆದ ಬೇಸಿಗೆ ಶಿಬಿರದ ಶಿಬಿರಾಗ್ನಿ ಕಾರ್ಯಕ್ರಮವನ್ನು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಹಾಗೂ ಕೊಡಗು ಜಿಲ್ಲಾ ಸಂಸ್ಥೆಯ ಗೈಡ್ ಆಯುಕ್ತರು ಆಗಿರುವ ಶ್ರೀಮತಿ ರಾಣಿ ಮಾಚಯ್ಯನವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರಾರವರು ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಕೋಲಾರದ ರೋವರ್ ಶ್ರೀ ವಿನಯ್ ಕುಮಾರ್‌ರವರು ಉಪಸ್ಥಿತರಿದ್ದರು.



* ಕೊಡಗು ಜಿಲ್ಲಾ ಸಂಸ್ಥೆ ವತಿಯಿಂದ ಏಪ್ರಿಲ್ 22 ರಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವಕೀಲರ ಸಂಘ, ವೈ.ಎಂ.ಸಿ.ಎ. ಕೂರ್ಗ್ ಮಡಿಕೇರಿ, ಅರಣ್ಯ ಇಲಾಖೆ, ಜಿಲ್ಲಾ ಪಂಚಾಯತ್, ಸಿ.ಎಸ್.ಐ. ಶಾಂತಿ ಚರ್ಚ್, ಮಡಿಕೇರಿ. ಇವರ ಸಂಯುಕ್ತ ಆಶ್ರಯದಲ್ಲಿ ಭೂ ದಿನಾಚರಣೆ ಮತ್ತು ಮತದಾನ ಅರಿವು ಕಾರ್ಯಕ್ರಮವನ್ನು ನಗರ ಸಭಾ ಶಾಲಾ ಆವರಣ ಜಿ.ಟಿ. ರಸ್ತೆ ಇಲ್ಲಿ ನಡೆಸಲಾಯಿತು. ಗೌ. ಶ್ರೀ ಹೆಚ್.ಸಿ. ಶ್ಯಾಮ್ ಪ್ರಸಾದ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರ ಕಾರ್ಯಕ್ರಮವನ್ನು ಉದ್ಘಾಟಿಸಿದರು. "ಭೂಮಿಯನ್ನು ಹಾಳುಗೆಡಲು ಮನುಷ್ಯನೆ ಮೂಲ ಕಾರಣ ಮನುಷ್ಯನ ದುರಾಸೆಯಿಂದ ಇಂದು ಪ್ರಕೃತಿ ಹಾಳಾಗುತ್ತಿದೆ. ಮನುಷ್ಯ ಕಾಲಿಟ್ಟಲ್ಲಿ ಗರಿಕೆಯು ಬೆಳೆಯುವುದಿಲ್ಲ ಪ್ರಕೃತಿಯು ಮನುಷ್ಯನಿಗೆ ಎಷ್ಟೆಲ್ಲಾ ಸಂಪನ್ಮೂಲ ನೀಡಿದ್ದರು ಕೂಡ ಪ್ರಕೃತಿಗೆ ನಾವು ಏನನ್ನು ನೀಡುತ್ತೇವೆ ಎಂದು ನಾವೇ ಪ್ರಶ್ನೆ ಮಾಡಬೇಕು" ಎಂದು ನುಡಿದರು. ಮುಖ್ಯ



ಅತಿಥಿಯಾಗಿ ಆಗಮಿಸಿದ ಗೌ॥ ಶ್ರೀ ಪ್ರಸಾದ್ ಕೆ.ಬಿ. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೊಡಗು ಇವರು ಮಾತನಾಡಿ "ಭೂಮಿಯಲ್ಲಿ ಮನುಷ್ಯನಿಗೆ ಮಾತ್ರ ಬದುಕುವ ಹಕ್ಕು ಇಲ್ಲ ಪ್ರಾಣಿ ಪಕ್ಷಿಗಳಿಗೂ ಪ್ರಕೃತಿಯಲ್ಲಿ ಬದುಕುವ ಹಕ್ಕು ಇದೆ. ಅಲ್ಲದೆ ಮನುಷ್ಯನು ಇಂದು ಅವನ ದುರಾಸೆಯಿಂದ ಪ್ರಕೃತಿಯನ್ನು ಕಲುಷಿತಗೊಳಿಸುತ್ತಿದ್ದಾನೆ" ಎಂದು ನುಡಿದರು.

ಇನ್ನೋರ್ವ ಅತಿಥಿಯಾಗಿ ಆಗಮಿಸಿದ ಶ್ರೀ ವರ್ಣಿತ್ ನೇಗಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕೊಡಗು, ಇವರು ಮಾತನಾಡಿ "ಇದೇ ಏಪ್ರಿಲ್ 26 ರಂದು ಲೋಕಸಭಾ ಚುನಾವಣೆ ಬರುತ್ತ ಇದ್ದು ಎಲ್ಲಾರು ಮತದಾನ ಮಾಡುವಂತೆ ಜಾಗೃತಿ ಮೂಡಿಸಬೇಕಾಗಿದ್ದು ನಮ್ಮ ಆದ್ಯ ಕರ್ತವ್ಯವಾಗಿದೆ ಏಪ್ರಿಲ್ 26 ರಂದು ಮತದಾನದ ಹಬ್ಬವೆಂದು ಎಲ್ಲಾರು ಭಾಗವಹಿಸಬೇಕು" ಎಂದು ನುಡಿದರು.

ಶ್ರೀ ಭಾಸ್ಕರ್ ಡಿ.ಸಿ.ಎಫ್. ಅರಣ್ಯ ಇಲಾಖೆ ಇವರು ಮಾತನಾಡುತ್ತ "ಇಂದು ಎಲ್ಲವು ಪ್ಲಾಸ್ಟಿಕ್ ಮಯವಾಗಿದೆ. ಪ್ರಕೃತಿಗೆ ಹಾನಿ ಮಾಡುವಂತೆ ಪ್ಲಾಸ್ಟಿಕ್‌ನ್ನು ಎಲ್ಲೆಂದರಲ್ಲಿ ಬಿಸಾಕಿ ಪ್ರಕೃತಿಯನ್ನು ಪ್ಲಾಸ್ಟಿಕ್ ಮಯಮಾಡಲು ಮನುಷ್ಯ ಹೊರಟಿರುತ್ತಾನೆ. ಇನ್ನು ಮುಂದಾದರೂ ಮನುಷ್ಯ ಬುದ್ಧಿ ಕಲಿಯಬೇಕಾಗಿದೆ" ಎಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯುರವರು ಮಾತನಾಡುತ್ತ "ಮೊದಲು ನಾವು ಮಕ್ಕಳಲ್ಲಿ ಪ್ರಕೃತಿಯನ್ನು ಕಲುಷಿತಗೊಳಿಸದಂತೆ ಜಾಗೃತಿ ಮೂಡಿಸಬೇಕು ಮುಂದಿನ ಪ್ರಜೆಗಳಾಗುವ ಮಕ್ಕಳಲ್ಲಿ ಈಗಿನಿಂದಲೇ ಜಾಗೃತಿ ಮೂಡಿಸುತ್ತಾ ಬಂದರೆ ಮುಂದಿನ ಪೀಳಿಗೆಗಾದರು ಉತ್ತಮ ಪರಿಸರವುಳ್ಳ ಪ್ರಕೃತಿಯನ್ನು ಕೊಡಬಹುದು" ಎಂದು ನುಡಿದರು. ಕಾರ್ಯಕ್ರಮದಲ್ಲಿ ಗೈಡ್ ಆಯುಕ್ತರು ಮತ್ತು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಆದ ಶ್ರೀಮತಿ ರಾಣಿ ಮಾಚಯ್ಯ, ರೆ. ಜೇಸನ್ ಗೌಂಡರ್, ಪಿ.ಎಸ್.ಐ. ಶಾಂತಿ ಚರ್ಚ್ ವಿದ್ಯಾರ್ಥಿಗಳು ಮತ್ತು ಸರಕಾರಿ ಪ್ರಥಮ ದರ್ಜೆ ಕಾಲೇಜು ಮಡಿಕೇರಿಯ ರೇಂಜರ್ಸ್ ಮತ್ತು ರೋವರ್ಸ್ ಕಾರ್ಯಕ್ರಮದಲ್ಲಿ ಭಾಗಿಗಳಾಗಿದ್ದರು.




## ಕೋಲಾರ

* ಮಾರ್ಚ್ 23 ರಂದು ನಗರದ ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಿದ್ದ ವಸ್ತ್ರ ಭಂಡಾರ ಸಂಗ್ರಹ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡುತ್ತಾ "ನಾವು ಬಳಸಿದ ವಸ್ತುಗಳು ನಮಗೆ ಅನಗತ್ಯವಾದದ್ದು ಬೇರೆಯವರಿಗೆ ಅಗತ್ಯವಾಗಬಹುದು ಅಂತಹ ವಸ್ತುಗಳನ್ನು ಪುನರ್ ಬಳಕೆ ಮಾಡಲು ಎಲ್ಲರೂ ಕೈಜೋಡಿಸಬೇಕು" ಎಂದು ಜಿಲ್ಲಾ ಸಂಸ್ಥೆ ಕೋಲಾರ ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ರೋಟರಿ ಕೋಲಾರ ನಂದಿನಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೆ.ವಿ. ಶಂಕರಪ್ಪ ಅಭಿಪ್ರಾಯ ಪಟ್ಟರು. ಸ್ಕೌಟ್ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್ ಮುಂತಾದವರು ಉಪಸ್ಥಿತರಿದ್ದರು.




* ಮಾರ್ಚ್ 25 ರಿಂದ 30ರವರೆಗೆ ನಗರದ ಸ್ಕೌಟ್ ಭವನದಲ್ಲಿ ಜಿಲ್ಲಾ ಸಂಸ್ಥೆ ಕೋಲಾರ, ರೋಟರಿ ಕೋಲಾರ ನಂದಿನಿ, ಶ್ರೀಚೌಡೇಶ್ವರಿ ರೂರಲ್ ಅಂಡ್ ಡೆವಲಪ್‌ಮೆಂಟ್ ಟ್ರಸ್ಟ್ ಹಾಗೂ ಶ್ರೀಮತಿ ರತ್ನಮಾಲಾ ಮಹಿಳಾ ಮಂಡಳಿ ವತಿಯಿಂದ ಬೇಸಿಗೆ ಶಿಬಿರವನ್ನು ನಿವೃತ್ತ ಪ್ರಾಂಶುಪಾಲರಾದ ಶ್ರೀಯುತ ವೆಂಕಟಸ್ವಾಮಿ ಮತ್ತು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾದ ಶ್ರೀ ಚೌಡಪ್ಪರವರು ಉದ್ಘಾಟಿಸಿದರು. ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಯುತ ಕೆ.ವಿ. ಶಂಕರಪ್ಪರವರು ಪ್ರಮಾಣಪತ್ರವನ್ನು ವಿತರಿಸಿ ಮಾತನಾಡುತ್ತಾ "ಬೇಸಿಗೆ ಶಿಬಿರಗಳಲ್ಲಿ ಭಾಗವಹಿಸುವುದರಿಂದ ತಮ್ಮಲ್ಲಿರುವ ಕೌಶಲಗಳನ್ನು ಹೆಚ್ಚಿಸಿಕೊಂಡು ತಮ್ಮ ಪ್ರತಿಭೆಗಳ ಅನಾವರಣಕ್ಕೆ ಸಹಕಾರಿಯಾಗಿದೆ, ಶಾಲಾ ಮತ್ತು ಮನೆಯಲ್ಲಿ ಕಲಿಸದ ಜೀವನ ಕೌಶಲಗಳನ್ನು ಶಿಬಿರಗಳಲ್ಲಿ ಕಲಿಯಬಹುದು ಇಂತಹ ಶಿಬಿರಗಳಲ್ಲಿ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿದಾಗ ಮತ್ತಷ್ಟು ಜನರಿಗೆ ಪ್ರಯೋಜನವಾಗಲಿದೆ" ಎಂದು ತಿಳಿಸಿದರು. ಜಿಲ್ಲಾ ಸ್ಥಾನಿಕ ಆಯುಕ್ತ ಶ್ರೀ ಬೇವಹಳ್ಳಿ ಶಂಕರಪ್ಪರವರು, ಶ್ರೀಮತಿ ರತ್ನಮಾಲಾ ಮಹಿಳಾ ಮಂಡಳಿಯ ಅಧ್ಯಕ್ಷೆಯಾದ ಶ್ರೀಮತಿ ರತ್ನಮಾಲಾ ಭಾಗವಹಿಸಿದ್ದರು.

* ಮಾರ್ಚ್ 25 ರಿಂದ 27ರ ವರೆಗೆ ಮಾಲೂರು ತಾಲ್ಲೂಕಿನ ಗುಂಡ್ಲಹಳ್ಳಿ ಶಾಲೆಯಲ್ಲಿ ಫ್ಲಾಕ್ ಲೀಡರ್ ಶ್ರೀಮತಿ ಸವಿತಾ ಬಾಬುರವರು ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಿದರು.

* ಮಾರ್ಚ್ 28 ರಿಂದ 30ರ ವರೆಗೆ ಶ್ರೀನಿವಾಸಪುರ ತಾಲ್ಲೂಕಿನ ಮಾಸ್ತೇನಹಳ್ಳಿ ಸರ್ಕಾರಿ ಹಿರಿಯ ಮತ್ತು ಪ್ರೌಢ ಶಾಲೆಗಳ ಸಂಯುಕ್ತ ಆಶ್ರಯದಲ್ಲಿ ಬೇಸಿಗೆ ಶಿಬಿರವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ವಿ.ಎಂ. ನಾರಾಯಣಸ್ವಾಮಿರವರ ನಾಯಕತ್ವದಲ್ಲಿ ಆಯೋಜನೆ ಮಾಡಲಾಗಿತ್ತು.

* ಏಪ್ರಿಲ್ 30 ರಂದು ಜಿಲ್ಲಾ ಸಂಸ್ಥೆ ಕೋಲಾರ ಮತ್ತು ರೋಟರಿ ಕೋಲಾರ ನಂದಿನಿ ವತಿಯಿಂದ ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ಸಾಮ್ರಾಟ್ ರೋವರ್ ಕ್ರೂ ನ ಹಿರಿಯ ರೋವರ್, ರಾಷ್ಟ್ರಪತಿ ರೋವರ್ ಪ್ರಶಸ್ತಿ ಪುರಸ್ಕೃತರಾದ ಲೆಫ್ಟಿನೆಂಟ್ ಕರ್ನಲ್ ಅಮರನಾಥ್‌ರವರಿಗೆ ಶ್ರದ್ಧಾಂಜಲಿಯನ್ನು ನಗರದ ಸ್ಕೌಟ್ ಭವನದಲ್ಲಿ ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ

ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ, ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್ ಮುಂತಾದವರು ಉಪಸ್ಥಿತರಿದ್ದರು.

* ಏಪ್ರಿಲ್ 1 ರಿಂದ 4 ರವರೆಗೆ ನಗರದ ಗುಪ್ತಾಸ್ ಇಂಟರ್ ನ್ಯಾಷನಲ್ ಶಾಲೆಯಲ್ಲಿನ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್‌ರವರು ಬೇಸಿಗೆ ಶಿಬಿರವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಶ್ರೀಮತಿ ಜಾಯ್ ಜಯಶ್ರೀ, ಕಾಡಹಳ್ಳಿ ಶಶಿಕುಮಾರ್ ಮುಂತಾದವರು ಉಪಸ್ಥಿತರಿದ್ದರು.

* ಏಪ್ರಿಲ್ 4 ರಿಂದ 6 ರವರೆಗೆ ಬೇಸಿಗೆ ಶಿಬಿರವನ್ನು ನಗರದ ರೆಹಮತ್ ನಗರ ಶಾಲೆಯಲ್ಲಿ ಜರುಗಿಸಲಾಯಿತು. “ಅತಿಯಾದ ಬಿಸಿಲಿನ ತಾಪಕ್ಕೆ ಯಾರು ಹೋಗಬಾರದು, ಹೆಚ್ಚು ನೀರು ಕುಡಿಯುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು” ಎಂದು ರೆಹಮತ್ ನಗರ ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಪರ್ವಿನ್ ಬೇಗಂರವರು ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಸ್ಥಳೀಯ ಸಂಸ್ಥೆ ಖಜಾಂಚಿ ಶ್ರೀ ಮುನಿಸ್ವಾಮಿರೆಡ್ಡಿ, ಶಾಲೆಯ ಶಿಕ್ಷಕರಾದ ಹನುಮಾನ್ ಸಿಂಗ್ ಮುಂತಾದವರು ಉಪಸ್ಥಿತರಿದ್ದರು.



* ಏಪ್ರಿಲ್ 10 ರಿಂದ 14 ರವರೆಗೆ ನಗರದ ಹೊರವಲಯದಲ್ಲಿರುವ ಖಾದ್ರಿಪುರದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜನೆ ಮಾಡಿದ್ದ ಸ್ಕೌಟ್ಸ್ ಗೈಡ್ಸ್ ಬೇಸಿಗೆ ಶಿಬಿರವನ್ನು ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಸುಧಾ ರವರು ಉದ್ಘಾಟಿಸುತ್ತಾ ಮಾತನಾಡಿ “ಮನುಷ್ಯ ಆರೋಗ್ಯವಂತನಾಗಿರಬೇಕಾದರೆ ಪರಿಸರದಲ್ಲಿ ಸಿಗುವ ಹಣ್ಣು, ತರಕಾರಿ, ಹಸಿರು ಸೊಪ್ಪುಗಳನ್ನು ತಿನ್ನುವ ಮೂಲಕ ಯಾವುದೇ ವೈದ್ಯರನ್ನು ಸಂಪರ್ಕಿಸದೇ ನಾವು ನಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳಬಹುದು” ಎಂದು ತಿಳಿಸಿದರು. ಜಿಲ್ಲಾ ಆಯುಕ್ತರಾದ ಶ್ರೀ ಸುರೇಶ್, ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಉಮಾದೇವಿ ಮುಂತಾದವರು ಉಪಸ್ಥಿತರಿದ್ದರು.



* ಏಪ್ರಿಲ್ 14 ರಂದು ಡಾ॥ ಬಿ.ಆರ್. ಅಂಬೇಡ್ಕರ್ ರವರ ಜಂಯತಿ ಅಂಗವಾಗಿ ಕೆ.ಜಿ.ಎಫ್.ನ ಸರ್ಕಾರಿ ಆಸ್ಪತ್ರೆಯಲ್ಲಿ ಲೈಫ್ ಸೇವರ್ಸ್ ಅಸೋಸಿಯೇಶನ್, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೋಟರಿ ಕೋಲಾರ ನಂದಿನಿ ಸಂಸ್ಥೆಗಳ ಸಹಯೋಗದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ 50ಕ್ಕೂ ಹೆಚ್ಚು ಸಲ ರಕ್ತದಾನ ಮಾಡಿದ ದಾನಿಗಳನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕರಾದ




ಡಾ॥ ಸುರೇಶ್‌ಕುಮಾರ್, ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ, ಜಿಲ್ಲಾ ಆಯಕ್ತರಾದ ಶ್ರೀ ಕೆ.ಆರ್. ಸುರೇಶ್ ಕೇಂದ್ರದ ಸಂಚಾಲಕರಾದ ಶ್ರೀ ವೆಂಕಟಾಚಲಪತಿ, ಲೈಫ್ ಸೇವರ್ಸ್‌ನ ಪದಾದಿಕಾರಿಗಳಾದ ಶ್ರೀ ಸಂಜೀವ್ ಕುಮಾರ್, ಶ್ರೀ ಸುಬ್ರಮಣಿ ಮುಂತಾದವರು ಉಪಸ್ಥಿತರಿದ್ದರು.

* ಏಪ್ರಿಲ್ 15 ರಿಂದ 18 ರವರೆಗೆ ಕೋಲಾರ ತಾಲ್ಲೂಕಿನ ಶ್ರೀ ಆರ್.ಎಲ್. ಜಾಲಪ್ಪ ಶಾಲೆಯಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ಶಿವಕುಮಾರ್ ಮತ್ತು ಗೈಡ್ ಕ್ಯಾಪ್ಟನ್ ಶ್ರೀಮತಿ ರಾಜೇಶ್ವರಿರವರ ನಾಯಕತ್ವದಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಯಿತು.

* ಏಪ್ರಿಲ್ 15 ರಿಂದ 18 ರವರೆಗೆ ಶ್ರೀನಿವಾಸಪುರ ತಾಲ್ಲೂಕಿನ ಕೂಳಗುರ್ಕಿ ಗ್ರಾಮದ ಇಂಡಿಯನ್ ಪಬ್ಲಿಕ್ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಶಾಲೆಯ ಕಬ್ ಮಾಸ್ಟರ್ ಶ್ರೀ ನಾರಾಯಣಸ್ವಾಮಿರವರ ನಾಯಕತ್ವದಲ್ಲಿ ಜರುಗಿಸಲಾಯಿತು.

* ಏಪ್ರಿಲ್ 15 ರಿಂದ 18 ರವರೆಗೆ ಬಂಗಾರಪೇಟೆಯ ಜೈನ್ ಗ್ಲೋಬಲ್ ಶಾಲೆಯಲ್ಲಿ ಬೇಸಿಗೆ ಶಿಬಿರವು ಸ್ಕೌಟ್ ಮಾಸ್ಟರ್ ಶ್ರೀ ಆಂಥೋನಿ ಜಯಕುಮಾರ್‌ರವರ ನಾಯಕತ್ವದಲ್ಲಿ ಜರುಗಿತು.

* ಏಪ್ರಿಲ್ 15 ರಿಂದ 18 ರವರೆಗೆ ಶ್ರೀನಿವಾಸಪುರ ತಾಲ್ಲೂಕಿನ ಯಲ್ದೂರು ಗ್ರಾಮದ ಪ್ರೀತಿ ವಿಧ್ಯಾಮಂದಿರ, ನ್ಯಾಷನಲ್ ಹೈಸ್ಕೂಲ್ ಶಾಲೆ, ಶ್ರೀ ಶ್ರೀನಿವಾಸ ಶಾಲೆ, ವಿಧ್ಯಾ ದೀಪ್ತಿ ಶಾಲೆಗಳ ಸಂಯುಕ್ತ ಆಶ್ರಯದಲ್ಲಿ ನ್ಯಾಷನಲ್ ಹೈಸ್ಕೂಲ್ ರಂಗಮಂದಿರ ಆವರಣದಲ್ಲಿ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಈ ಶಿಬಿರದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ನಾರಾಯಣಸ್ವಾಮಿ, ತರಬೇತಿ ಆಯುಕ್ತೆ ಶ್ರೀಮತಿ ಗೌರಾಬಾಯಿ ಮುಂತಾದವರು ಉಪಸ್ಥಿತರಿದ್ದರು.

* ಏಪ್ರೀಲ್ 16 ರಂದು ಎ.ಪಿ.ಡಿ. ಸಂಸ್ಥೆ ಬೆಂಗಳೂರು, ಸ್ವಾಭಿಮಾನ ವಿಕಲಚೇತನರ ಕ್ಷೇಮಾಭಿವೃದಿ ಸಂಘ, ಬೆನ್ನುಹುರಿ ವಿಶೇಷ ಚೇತನರ ಕ್ಷೇಮಾಭಿವೃದ್ದಿ ಸಂಘ, ಕೋಲಾರ ಜಿಲ್ಲೆ, ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಮತ್ತು ರೋಟರಿ ಕೋಲಾರ ನಂದಿನಿ ವತಿಯಿಂದ ಬೆನ್ನುಹುರಿ ವಿಶೇಷ ಚೇತನರಿಗೆ ಗಾಲಿಕುರ್ಚಿಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ಸಂಸ್ಥೆಯ ಶ್ರೀಮತಿ ಶೈಲಜಾ, ಕ್ಷೇಮಾಭೀವೃದ್ದಿ ಸಂಘದ ಅಧ್ಯಕ್ಷರಾದ ಶ್ರೀ ಚೆನ್ನಕೃಷ್ಣಪ್ಪ, ಕಾರ್ಯದರ್ಶಿ ಹೆನ್ರಿಜೋಸೆಫ್ ಮುಂತಾದವರು ಉಪಸ್ಥಿತರಿದ್ದರು.



## ಮಧುಗಿರಿ

* ಮಾರ್ಚ್ 19 ರಂದು ಪಾವಗಡ ತಾಲೂಕ್ ಆಡಳಿತದಿಂದ ಸಂವಿಧಾನ ಜಾಗೃತಿ ಜಾಥಾವನ್ನು ನಡೆಸಲಾಯಿತು ಈ ಜಾಥಾ ಕಾರ್ಯಕ್ರಮದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಶಿಕ್ಷಕರು ಪಾಲ್ಗೊಂಡಿದ್ದರು.

* ಮಾರ್ಚ್ 19 ರಂದು ಕೊರಟಗೆರೆ ತಾಲ್ಲೂಕು ಪಂಚಾಯತ್ ಹಂತದಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸ್ಕೌಟ್ಸ್ ಮತ್ತು ಗೈಡ್‌ಗಳು ಹಾಗೂ ಶಿಕ್ಷಕರು ಮತದಾನ ಜಾಗೃತಿ ಜಾಥಾವನ್ನು ನಡೆಸಿದರು.

* ಮಾರ್ಚ್ 19 ರಂದು ಮಧುಗಿರಿ ಶೈಕ್ಷಣಿಕ ಜಿಲ್ಲೆಯ ವತಿಯಿಂದ ಹಾಗೂ ತಾಲ್ಲೂಕು ಆಡಳಿತ ವತಿಯಿಂದ ಜಿಲ್ಲಾ ಉಪ ನಿರ್ದೇಶಕರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಮಂಜುನಾಥ, ಡಿ.ಡಿ.ಪಿ.ಐ., ಶ್ರೀ ಹನುಮಂತ ರಾಯಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮಧುಗಿರಿ ತಾಲ್ಲೂಕೂ ಹಾಗು ಶ್ರೀ ಹನುಮಂತ ರಾಯಪ್ಪ, ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿಗಳು, ಇತರೆ ಇಲಾಖೆಗಳ ಅಧಿಕಾರಿಗಳು, ದೈಹಿಕ ಶಿಕ್ಷಣ ಪರಿವೀಕ್ಷಕರು, ಜಿಲ್ಲಾ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಶಾಲೆಯ ಸ್ಕೌಟ್ ಗೈಡ್‌ಗಳು ಮತ್ತು ಶಿಕ್ಷಕರು ಸಂವಿಧಾನ ಜಾಗೃತಿ ಜಾಥಾವನ್ನು ನಡೆಸಿದರು.

* ಏಪ್ರಿಲ್ 1 ರಂದು ಜಿ.ಎಚ್.ಪಿ.ಎಸ್. ಶಾಲೆ ಹಕ್ಕಾಜಹಳ್ಳಿ ಇಲ್ಲಿ ಬೇಸಿಗೆ ಶಿಬಿರ ಆಯೋಜಿಸಲಾಯಿತು.



* ಏಪ್ರಿಲ್ 1 ರಂದು ಕೆ.ಪಿ.ಎಸ್.ಐ.ಕೆ ಕಾಲೋನಿ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ಪ್ರಾರಂಭ ಮಾಡಲಾಯಿತು.

* ಏಪ್ರಿಲ್ 2 ರಂದು ಜಿ.ಎಚ್.ಪಿ.ಎಸ್. ಅಕ್ಕಿ ರಾಮಪುರ ಇಲ್ಲಿ ಬೇಸಿಗೆ ಶಿಬಿರವನ್ನು ಪ್ರಾರಂಭ ಮಾಡಲಾಯಿತು.

* ಏಪ್ರಿಲ್ 4 ರಿಂದ ಒಳವನಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೇಸಿಗೆ ಶಿಬಿರ ಮೂರು ದಿನಗಳ ಕಾಲ ಯಶಸ್ವಿಯಾಗಿ ನಡೆಸಲಾಯಿತು.

* ಏಪ್ರಿಲ್ 4 ರಿಂದ ಚೆನ್ನಪಟ್ಟಣ ಜಿ.ಎಚ್.ಪಿ. ಶಾಲೆ ವತಿಯಿಂದ ಮೂರು ದಿನಗಳ ಬೇಸಿಗೆ ಶಿಬಿರವನ್ನು ಯಶಸ್ವಿಯಾಗಿ ನಡೆಸಲಾಯಿತು.

* ಏಪ್ರಿಲ್ 4 ರಂದು ಜಿ.ಎಚ್.ಪಿ.ಎಸ್. ಕಬ್ ಮತ್ತು ಬುಲ್‌ಬುಲ್ ವಿದ್ಯಾರ್ಥಿಗಳಿಂದ ಸ್ವಚ್ಛತಾ ಕಾರ್ಯಕ್ರಮ ಮಾಡುವ ಮುಖಾಂತರ ಬೇಸಿಗೆ ಶಿಬಿರವನ್ನು ಪ್ರಾರಂಭ ಮಾಡಲಾಯಿತು.

* ಏಪ್ರಿಲ್ 5 ರಿಂದ ಜಿ.ಎಚ್.ಪಿ.ಎಸ್. ಕಬ್ಬಿಗೆರೆ ಶಾಲೆಯಲ್ಲಿ ಮೂರು ದಿನಗಳ ಕಾಲ ಬೇಸಿಗೆ ಶಿಬಿರವನ್ನು ಪ್ರಾರಂಭ ಮಾಡಲಾಯಿತು.

* ಏಪ್ರಿಲ್ 5 ರಂದು ಬನಹಟ್ಟಿ ಸ್ಕೌಟ್ ಗೈಡ್‌ಗಳಿಂದ ಬೇಸಿಗೆ ಶಿಬಿರವನ್ನು ಮೂರು ದಿನಗಳ ಕಾಲ ಪ್ರಾರಂಭ ಮಾಡಲಾಯಿತು.

* ಏಪ್ರಿಲ್ 6 ರಂದು ಟಿ. ರೇಕ್ ಶಾಲೆಯಲ್ಲಿ ಮೂರು ದಿನಗಳ ಕಾಲ ಬೇಸಿಗೆ ಶಿಬಿರವನ್ನು ಪ್ರಾರಂಭ ಮಾಡಲಾಯಿತು.

## ಮೈಸೂರು

* ಮಾರ್ಚ್ 16 ರಂದು ಮೈಸೂರು ಜಿಲ್ಲಾ ಸಂಸ್ಥೆಯವರು, ಶ್ರೀ ಕೆ. ಪುಟ್ಟಸ್ವಾಮಿ, ಪ್ರಥಮ ದರ್ಜೆ ಕಾಲೇಜು ಮೈಸೂರು ಇವರ ಸಹಯೋಗದೊಂದಿಗೆ ಮೈಸೂರು, ಮಂಡ್ಯ ಹಾಗೂ ಚಾಮರಾಜನಗರದ ರೋವರ್ಸ್–ರೇಂಜರ್ಸ್‌ಗಳಿಗೆ ರೋವರ್ಸ್–ರೇಂಜರ್ಸ್ ಸಮಾವೇಶ 2024 ಹಾಗೂ ಸುಸ್ಥಿರ ಅಭಿವೃದ್ಧಿ ಯೋಜನೆಗಳ ಬಗ್ಗೆ ಕಿರುನಾಟಕ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಈ ಸಮಾವೇಶದಲ್ಲಿ ಮೈಸೂರು, ಮಂಡ್ಯ ಹಾಗೂ ಚಾಮರಾಜನಗರದ 1,100 ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು.

21 ರೋವರ್ ಘಟಕಗಳು ಸುಸ್ಥಿರ ಅಭಿವೃದ್ಧಿ ಯೋಜನೆಗಳ ಬಗ್ಗೆ ನಡೆದ ಕಿರು ನಾಟಕಗಳ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಪ್ರಧಾನ ಆಯುಕ್ತರು ಸಮಾವೇಶವನ್ನು ಉದ್ಘಾಟಿಸಿದರು. ಡಾ. ವಿಜಯಲಕ್ಷ್ಮಿ, ಎ.ಎಚ್.ಎಂ. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಮೈಸೂರು ಹಾಗೂ ಶ್ರೀ ಪಿ. ವಿಶ್ವನಾಥ್ ಜಿಲ್ಲಾ ಮುಖ್ಯ ಆಯುಕ್ತರು, ಮೈಸೂರು ಜಿಲ್ಲಾ ಸಂಸ್ಥೆ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಗುಂಡಪ್ಪಗೌಡ, ಗೌರವ ಅಧ್ಯಕ್ಷರು, ವಿದ್ಯಾವರ್ಧಕ ಸಂಘ, ಮೈಸೂರು ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು, ಈ ಸಭೆಯಲ್ಲಿ ಡಾ. ಕೆ. ಬಿ. ಗುರುಮೂರ್ತಿ, ಜಿಲ್ಲಾ ಖಜಾಂಚಿಗಳು, ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಶೈಲ ರಾಮಣ್ಣನವರ್, ಖಜಾಂಚಿಗಳು ವಿದ್ಯಾವರ್ಧಕ ಸಂಘ, ಮೈಸೂರು ಹಾಗೂ ಡಾ. ಎಂ. ಶಿವಲಿಂಗೇಗೌಡ ಪ್ರಾಂಶುಪಾಲರು ಶ್ರೀ ಕೆ. ಪುಟ್ಟಸ್ವಾಮಿ, ಪ್ರಥಮ ದರ್ಜೆ ಕಾಲೇಜು ಭಾಗವಹಿಸಿದ್ದರು. ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀ ರಾಜೇಶ್ ಅವಲಕ್ಕಿ, ಎಲ್.ಟಿ. (ರೋವರ್), ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎ.ಎಸ್.ಓ.ಸಿ. ಮತ್ತು ಶ್ರೀ ರಾಮಕೃಷ್ಣ ರಾವ್, ಆರ್ಕಿಟೆಕ್ ಹಾಗೂ ಅಧ್ಯಕ್ಷರು, ಐಜಿಬಿಸಿ ಮೈಸೂರುರವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಸಂಜೆ ನಡೆದ ಮುಕ್ತಾಯ ಸಮಾರಂಭದಲ್ಲಿ ಮುಕ್ತಾಯ ಭಾಷಣವನ್ನು ಶ್ರೀ ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು, ಮಾಡಿದರು. ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಪ್ರಧಾನ ಆಯುಕ್ತರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಡಾ. ಕೆ.ಬಿ. ಗುರುಮೂರ್ತಿ ಜಿಲ್ಲಾ ಖಜಾಂಚಿಗಳು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಬಿ.ಕೆ. ಬಸವರಾಜು, ರಾಜ್ಯ ಜಂಟಿ ಕಾರ್ಯದರ್ಶಿಗಳು ಹಾಗೂ ಮೈಸೂರು ಜಿಲ್ಲಾ ಸಂಸ್ಥೆ ಮತ್ತು ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



## ರಾಯಚೂರು

* ಮಾರ್ಚ್ 18 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಸ್ಕಿ ಮತ್ತು ಜೋಗಿನ್ ರಾಮಣ್ಣ ಸ್ಮಾರಕ ಪ್ರೌಢ ಶಾಲೆಯಲ್ಲಿ ಎರಡನೇ ದಿನದ ಬೇಸಿಗೆ ಶಿಬಿರ ಕಾರ್ಯಕ್ರಮದಲ್ಲಿ ಶ್ರೀಮತಿ ಪುಷ್ಪ ಬಿ., ಮುಖ್ಯೋಪಾಧ್ಯಾಯರು (ಗೈಡ್ ಕ್ಯಾಪ್ಟನ್) ಸರ್ಕಾರಿ ಉನ್ನತೀಕರಿಸಿದ ಪ್ರಾಥಮಿಕ ಶಾಲೆ ವಟಗಲ್ ಇವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಶ್ರೀ ಹನುಮೇಶ, ಸ್ಕೌಟ್ ಮಾಸ್ಟರ್, ಅತಿಥಿಯಾಗಿ ಪಾಲ್ಗೊಂಡಿದ್ದರು. ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಬೇಸಿಗೆ ಶಿಬಿರಕ್ಕೆ ಚಾಲನೆ ನೀಡಲಾಗಿದೆ.



* ಮಾರ್ಚ್ 23 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಕಾಕತೀಯ ಶಾಲೆ, ಮಾನ್ವಿ ವತಿಯಿಂದ ಕಬ್ಸ್, ಬುಲ್-ಬುಲ್ಸ್, ಸ್ಕೌಟ್ಸ್, ಗೈಡ್ಸ್ ಮಕ್ಕಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ರಜನಿ ಡಿ., ರಾಜ್ಯ ಪರಿಷತ್ ಸದಸ್ಯರು (ಗೈ), ಶ್ರೀಮತಿ ಪರಿಮಳಾ ಗೈಡ್ಸ್ ಕ್ಯಾಪ್ಟನ್, ಶ್ರೀಮತಿ ವಸುಂಧರಾ ಫ್ಲಾಕ್ ಲೀಡರ್, ಶ್ರೀ ಶಿವರಾಜಪ್ಪ ಸ್ಕೌಟ್ ಮಾಸ್ಟರ್, ಶ್ರೀ ಚಂದ್ರಶೇಖರ ಎ.ಎಲ್.ಟಿ.(ಸಿ) ಶ್ರೀ ವೆಂಕಟೇಶ ಪೂಜಾರಿ ಸ್ಕೌಟ್ಸ್ ಹಾಗೂ ಕಬ್ಸ್-ಬುಲ್‌ಬುಲ್, ಸ್ಕೌಟ್ಸ್, ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.



* ಮಾರ್ಚ್ 28 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ದೇವದುರ್ಗ, ಕರ್ನಾಟಕ ಪಬ್ಲಿಕ್ ಸ್ಕೂಲ್, ದೇವದುರ್ಗ, ಸರಕಾರಿ ಬಾಲಕಿಯ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ದೇವದುರ್ಗ ಇವರ ಸಂಯುಕ್ತ ಆಶ್ರಯದಲ್ಲಿ ಬೇಸಿಗೆ ಶಿಬಿರ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಶ್ರೀ ತಿರುಪತಿ ಸೂಗೂರು, ಅಧ್ಯಕ್ಷರು ಸ್ಥಳೀಯ ಸಂಸ್ಥೆ ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಂ.ವಿ. ಕವಡಿಮಟ್ಟಿ ತಾಲ್ಲೂಕ ದೈಹಿಕ ಶಿಕ್ಷಣಾಧಿಕಾರಿಗಳು ಉದ್ಘಾಟಕರಾಗಿದ್ದರು. ಅತಿಥಿಗಳಾಗಿ ಶ್ರೀ ಶ್ರೀನಿವಾಸ್ ಇಅಔ ಶ್ರೀ ನಾಗರಾಜ್ ಪಾಟೀಲು ಮುಖ್ಯ ಗುರುಗಳು ಶ್ರೀ ಭುವನೇಶ್ವರಿ ಮುಖ್ಯಗುರುಗಳು ಭಾಗವಹಿಸಿದ್ದರು.



* ಮಾರ್ಚ್ 29 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಶಾಂತಿನಿಕೇತನ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆ, ಸಿರವಾರ ವತಿಯಿಂದ ಕಬ್ಸ್, ಬುಲ್-ಬುಲ್ಸ್, ಸ್ಕೌಟ್ಸ್, ಗೈಡ್ಸ್‌ಗಳಿಗೆ ಬೇಸಿಗೆ ಶಿಬಿರವನ್ನು ನಡೆಸಲಾಯಿತು.



* ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ದೇವದುರ್ಗ ಮತ್ತು ಜ್ಞಾನ ಸಿಂಧು HPS ಮಸರಕಲ್, ಶಾಲೆಯಲ್ಲಿ ಮಾರ್ಚ್ 29 ರಿಂದ 01ರ ವರೆಗೆ ಬೇಸಿಗೆ ಶಿಬಿರವನ್ನು ಶ್ರೀ ಶ್ರೀ ಮುರುಘೇಂದ್ರ ಸ್ವಾಮಿ ವಿರಕ್ತಮಠ ಮಸರಕಲ್‌ರವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು.

* ಏಪ್ರಿಲ್ 14 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಜಿಲ್ಲಾ ಸ್ಕೌಟ್ಸ್ ಭವನ, ರಾಯಚೂರು ಇಲ್ಲಿ ಭಾರತ ರತ್ನ ಸಂವಿಧಾನ ಶಿಲ್ಪಿ, ಡಾ॥ ಬಿ.ಆರ್. ಅಂಬೇಡ್ಕರ್ ರವರ ಜಯಂತಿಯನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು, ಶ್ರೀ ಎನ್. ಶೇಖರ್, ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಅಂಬಣ್ಣ ನಾಯಕ ಮ್ಯಾಕಲ್, ಎಸ್.ಜಿ.ವಿ/ಎಸ್.ಎಮ್.ಸಿ.ರವರು ಉಪಸ್ಥಿತರಿದ್ದರು.



## ಶಿರಸಿ

* ವರದಾ ದಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮಾಡನಕೇರಿ ತಾ॥ ಶಿರಸಿ ಇಲ್ಲಿಯ ವಿದ್ಯಾರ್ಥಿಗಳಿಗೆ ಬೇಸಿಗೆ ರಜೆಯಲ್ಲಿ ಅಭ್ಯಾಸದ ಜೊತೆ ಗಿಡ ಬೆಳೆಸುವ ವಿನೂತನ ಪ್ರಯೋಗಕ್ಕೆ ಹೆಜ್ಜೆ ಇಡಲಾಗಿದೆ. ಶಾಲಾ ಶಿಕ್ಷಕರಾದ ಸ್ಕೌಟ್ ಮಾಸ್ಟರ್ ಶ್ರೀ ಎನ್.ಎಸ್. ಭಾಗ್ವತ್ ಅವರು ತಮ್ಮ ಮನೆಯಲ್ಲಿ ತಾವೇ ಬೆಳೆದ ಕೋಕಂ ಮರದ ಬೀಜದಿಂದ 50ಕ್ಕೂ ಹೆಚ್ಚು ಗಿಡಗಳನ್ನು ಮಾಡಿ ವಿದ್ಯಾರ್ಥಿಗಳಿಗೆ ಬೇಸಿಗೆ ರಜೆ ಆರಂಭಕ್ಕೂ ಮುನ್ನ ವಿತರಿಸಿ ಆರೈಕೆ ಮಾಡಿ ಮಳೆಗಾಲದಲ್ಲಿ ತಮ್ಮ ತಮ್ಮ ಮನೆಗಳ ತೋಟದಲ್ಲಿ ನೆಡುವಂತೆ ತಿಳಿಸಿ ಮಕ್ಕಳಿಗೆ ಪರಿಸರದ ಪಾಠ ಮಾಡಿರುವುದು ಸಾರ್ವಜನಿಕ ಪ್ರಶಂಸೆಗೆ ಪಾತ್ರವಾಗಿದೆ.

* ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸುಗಾವಿ, ಮಾಡನಕೇರಿ ಮತ್ತು ನೆಹರೂ ಪ್ರೌಢಶಾಲೆ ಒಣೀಕೇರಿಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಬೇಸಿಗೆ ಶಿಬಿರಕ್ಕೆ, ಸುಗಾವಿ ಶಾಲೆಯಲ್ಲಿ ಪಕ್ಷಿಗಳಿಗೆ ಆಹಾರ ಮತ್ತು ನೀರಿಡುವ ಮೂಲಕ ಚಾಲನೆ ನೀಡಲಾಯಿತು. ಸುಗಾವಿ ಪ್ರಾಥಮಿಕ ಶಾಲಾ SDMC ಅಧ್ಯಕ್ಷರಾದ ಶ್ರೀ ರಾಘವೇಂದ್ರ ನಾಯ್ಕ, ಮುಖ್ಯಾಧ್ಯಾಪಕರಾದ ಶ್ರೀ ಯಶವಂತ ಹೊನ್ನಾವರ, ತಾಲೂಕಾ ಕಾರ್ಯದರ್ಶಿ ಶ್ರೀ ಎನ್.ಎಸ್. ಭಾಗ್ವತ್, ಖಜಾಂಚಿ ಶ್ರೀ ಬಿ.ಬಿ. ಮಾಲಿ ಪಾಟೀಲ್ ಹಾಗೂ ಸಂಪನ್ಮೂಲ ಶಿಕ್ಷಕರು ಉಪಸ್ಥಿತರಿದ್ದರು. ಶಿಕ್ಷಕರಾದ ಶ್ರೀ ಅಶೋಕ ಪಟಗಾರ ಸ್ವಾಗತಿಸಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ಸುಧಾ ಪಟಗಾರ ನಿರ್ವಹಿಸಿದರು. ಶಿಕ್ಷಕರಾದ ಶ್ರೀ ಶಿವರಾಜ್ ವಂದಿಸಿದರು. ಶ್ರೀ ಎನ್.ಎಸ್. ಭಾಗ್ವತ್, ಶ್ರೀ ಹೇಮಂತ್ ಭಂಡಾರಿ, ಶ್ರೀಮತಿ ಮಮತಾ .ಆರ್ ಹಾಗೂ ಶ್ರೀ ಗಂಗಾಧರ ಪಟಗಾರ ಸಂಪನ್ಮೂಲ ಶಿಕ್ಷಕರಾಗಿ ಕಾರ್ಯನಿರ್ವಹಿಸಿದರು. ಶಿಬಿರಕ್ಕೆ ಶಿರಸಿ ತಾಲೂಕಾ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಬಿ.ವಿ. ಗಣೇಶ ಭೇಟಿ ನೀಡಿ ತರಬೇತಿಯನ್ನು ವೀಕ್ಷಿಸಿದರು.

65 ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು. ಶಿಬಿರದಲ್ಲಿ ಸಂಪನ್ಮೂಲ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ ಸ್ಕೌಟ್ ಮಾಸ್ಟರ್ ಹಾಗೂ ಗೈಡ್ ಕ್ಯಾಪ್ಟನ್‌ಗಳಿಗೆ ಸುಗಾವಿ ಶಾಲಾ ವತಿಯಿಂದ ಸ್ಮರಣಿಕೆ ನೀಡಿ ಗೌರವಿಸಲಾಯಿತು.




## ಶಿವಮೊಗ್ಗ

* "ಭಾರತದಲ್ಲಿನ ಬಹುತ್ವವುಳ್ಳ ಸಮಾಜದಲ್ಲಿ ಹೆಚ್ಚಿನವರು ಎಲ್ಲ ಕ್ಷೇತ್ರಗಳಲ್ಲಿ ಅಸಮಾನತೆಯಿಂದ ಬಳಲುತ್ತಿದ್ದರು. ಇಂತಹ ಕಾಲ ಘಟ್ಟದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಂತಹ ಶ್ರೇಷ್ಠ ಗ್ರಂಥವನ್ನು ರಚಿಸಿ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದ ಮಹಾನ್ ನಾಯಕ" ಎಂದು ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಹೇಳಿದರು. ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 133ನೇ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಸ್ಕೌಟ್ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್ ಅವರು ಮಾತನಾಡುತ್ತಾ, "ಎಲ್ಲಾ ದೇಶದ ಸಂವಿಧಾನಕ್ಕಿಂತ ನಮ್ಮ ದೇಶದ ಸಂವಿಧಾನ ತುಂಬಾ ವಿಶೇಷವಾದದ್ದು ಅಂಬೇಡ್ಕರ್ ಅವರ ತತ್ವ ಆದರ್ಶ ಗುಣಗಳು ಹಾಗೂ ಆಡಳಿತಾತ್ಮಕ ಧೋರಣೆಯನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು" ಎಂದು ನುಡಿದರು. ಇದೇ ಸಮಯದಲ್ಲಿ ರಾಜ್ಯ ಸಂಸ್ಥೆಯವರು ಡಾ॥ ಬಿ.ಆರ್. ಅಂಬೇಡ್ಕರರವರ ಜಯಂತಿಯನ್ನು ವರ್ಚುವಲ್‌ನಲ್ಲಿ ಆಯೋಜಿಸಿದ್ದು, ಈ ವರ್ಚುವಲ್ ಸಭೆಯ ಅಧ್ಯಕ್ಷತೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ವಹಿಸಿ ಮಾತನಾಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಜಿಲ್ಲೆಯ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್ ರವರು ನಾಗರಿಕ ಪ್ರಾವೀಣ್ಯತಾ ಪದಕದ ಬಗ್ಗೆ



ಸವಿಸ್ತಾರವಾಗಿ ತಿಳಿಸಿಕೊಟ್ಟರು. ರಾಜ್ಯ ಪದಾಧಿಕಾರಿಗಳು ಜಿಲ್ಲೆಯ ಪದಾಧಿಕಾರಿಗಳು ಮಕ್ಕಳು ಹಾಜರಿದ್ದರು.

* "ಬದಲಾದ ಸಾಮಾಜಿಕ ಸನ್ನಿವೇಶದಲ್ಲಿ ಹೆಣ್ಣಿನ ಮಾದರಿಗಳು ಭಿನ್ನವಾಗಿವೆ. ಯಾವ ಕ್ಷೇತ್ರದಲ್ಲಿ ಹೆಣ್ಣಿನ ಸಾಧನೆ ಅಸಾಧ್ಯ ಎಂದು ಭಾವಿಸಲಾಗಿತ್ತೋ. ಅಂತಹ ಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆ ಮಾಡುತ್ತಿದ್ದಾರೆ" ಎಂದು ಸಹ್ಯಾದ್ರಿ ಕಲಾ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ॥ ಹಾಲಮ್ಮನವರು ಹೇಳಿದರು. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಶಿವಮೊಗ್ಗ ನಗರದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದರು. ಸ್ಕೌಟ್ ಜಿಲ್ಲಾ ಆಯುಕ್ತ ಶ್ರೀ ಕೆ.ಪಿ. ಬಿಂದುಕುಮಾರ್ ರವರು ಮಾತನಾಡುತ್ತಾ "ಮಹಿಳೆಯರು ಭಯವಿಲ್ಲದೆ ಓಡಾಡುವ ವಾತಾವರಣ ನಿರ್ಮಾಣವಾಗಬೇಕು. ಹೆಣ್ಣಿನ ಕೊಲೆ, ಸುಲಿಗೆ, ಅತ್ಯಾಚಾರದಂತಹ ಘಟನೆಗಳು ನಡೆದಾಗ ಆಕೆಯನ್ನೇ ದೂಷಿಸಿ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಬದಲು ನೀಚ ಕೃತ್ಯಕ್ಕೆ ಕೈ ಹಾಕಿದ ದೂಷಿತರನ್ನು ಹಿಡಿದು ಕಠಿಣ ಶಿಕ್ಷೆ ನೀಡುವುದರ ಮೂಲಕ ಮುಂದೆ ಇಂತಹ ಕೃತ್ಯಗಳು ನಡೆಯದಂತೆ ನೋಡಿಕೊಳ್ಳಬೇಕು" ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಜಿಲ್ಲಾ ಆಯುಕ್ತರು(ಗೈ) ರವರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್ ರವರು ಮಾತನಾಡಿ "ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆಮಾಡುತ್ತಿದ್ದು, ಎಲ್ಲರೂ ಸೂಕ್ತ ಪ್ರೋತ್ಸಾಹ ಹಾಗೂ ಸಹಕಾರ ನೀಡಬೇಕು" ಎಂದು ತಿಳಿಸಿದರು.



## ತುಮಕೂರು

* ಫೆಬ್ರವರಿ 8 ರಂದು ಸರ್ಕಾರಿ ಪ್ರೌಢಶಾಲೆ ದೊಡ್ಡವೀರನಹಳ್ಳಿ ಶಾಲೆಯಲ್ಲಿ ನೂತನ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕವನ್ನು ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಸೂರ್ಯಕಲಾ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಆಯುಕ್ತರು (ಗೈ) ಶ್ರೀಮತಿ ಸುಭಾಷಿಣಿ ಆರ್. ಕುಮಾರ್, ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಈಶ್ವರಯ್ಯ, ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕುಮಾರ್, ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ಚಂದ್ರಶೇಖರ್, ಜಿಲ್ಲಾ ಸಂಘಟಕರು ಶ್ರೀ ನವೀನ್ ಕುಮಾರ್ ಮತ್ತು ಶಾಲಾ ಎಸ್.ಡಿ.ಎಂ.ಸಿ. ಮಂಡಳಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



* 2023–24ನೇ ಸಾಲಿನ ಜಿಲ್ಲಾ ಮಟ್ಟದ ತೃತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಜಿಲ್ಲಾ ಸಂಸ್ಥೆ ವತಿಯಿಂದ ಫೆಬ್ರವರಿ 17 ರಿಂದ 18ರ ವರೆಗೆ ಚೇತನ ವಿದ್ಯಾ ಮಂದಿರ ತುಮಕೂರು ಇಲ್ಲಿ ಆಯೋಜಿಸಲಾಯಿತು. ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಗಂಗಾಧರ್ ಟಿ.ಸಿ., ಸ್ಕೌಟ್ ವಿಭಾಗದ ನಾಯಕತ್ವ ವಹಿಸಿದ್ದರು. ಶ್ರೀಮತಿ ಜಯಮ್ಮ ಜಿಲ್ಲಾ ತರಬೇತಿ ಆಯುಕ್ತರು ಇವರು ಗೈಡ್ ವಿಭಾಗದ ನಾಯಕತ್ವ ವಹಿಸಿದ್ದರು. ಶಿಬಿರದಲ್ಲಿ 167 ಸ್ಕೌಟ್ಸ್, 121 ಗೈಡ್ಸ್‌ಗಳು ಹಾಜರಾಗಿದ್ದರು.



* ಮಾರ್ಚ್ 3 ರಂದು ಜಿಲ್ಲೆಯ ರೋವರ್ಸ್–ರೇಂಜರ್ಸ್‌ಗಳಿಗೆ ಒಂದು ದಿನದ ಮಾಹಿತಿ ಕಾರ್ಯಾಗಾರವನ್ನು ಜಿಲ್ಲಾ ಸಂಸ್ಥೆ ವತಿಯಿಂದ ಆಯೋಜಿಸಲಾಯಿತು. ಓ.ವೈ.ಎಂ.ಎಸ್. ರಿಜಿಸ್ಟ್ರೇಷನ್ ಪ್ರಕ್ರಿಯೆಯ ಕುರಿತು, ಕಾಲೇಜುಗಳಲ್ಲಿ ಎಲ್ಲಾ



ದಳ ನಾಯಕರೂ ಮತ್ತು ರೋವರ್ಸ್–ರೇಂಜರ್ಸ್‌ಗಳು ಕಡ್ಡಾಯವಾಗಿ ನೊಂದಣಿಯಾಗುವ ಬಗ್ಗೆ ಹಾಗೂ ರಾಜ್ಯ ಪುರಸ್ಕಾರ ಪರೀಕ್ಷೆಗೆ ಅರ್ಜಿ ಸಲ್ಲಿಸುವುದು, ಪ್ರಾವೀಣ್ಯತಾ ಪದಕ ಪಡೆಯುವ ಬಗ್ಗೆ ಕುರಿತಾಗಿ ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. 85 ವಿದ್ಯಾರ್ಥಿಗಳು ಹಾಜರಿದ್ದರು.

* ಸ್ಥಳೀಯ ಸಂಸ್ಥೆ ಗುಬ್ಬಿ ವತಿಯಿಂದ ಫೆಬ್ರವರಿ 15 ರಿಂದ 17ರ ವರೆಗೆ ಬಾವಿಮನೆ ಕಲ್ಯಾಣ ಮಂಟಪದಲ್ಲಿ ಸ್ಕೌಟ್ ಅಂಡ್ ಗೈಡ್ಸ್‌ಗಳಿಗೆ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ತಾಲ್ಲೂಕು ಮಟ್ಟದ ರ್‍ಯಾಲಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



* ಮಾರ್ಚ್ 1 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉಪ್ಪರಹಳ್ಳಿ ತುಮಕೂರು ಇಲ್ಲಿ ನೂತನ ಸ್ಕೌಟ್ಸ್ ಘಟಕವನ್ನು ಉದ್ಘಾಟಿಸಲಾಯಿತು. ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಈಶ್ವರಯ್ಯ, ಎ.ಡಿ.ಸಿ. ಶ್ರೀ ಗಂಗಯ್ಯ, ಶಾಲೆಯ ಪ್ರಾಂಶುಪಾಲರು, ಶಾಲಾ ಶಿಕ್ಷಕರು ವಿದ್ಯಾರ್ಥಿಗಳು ಹಾಜರಿದ್ದರು.



* ಏಪ್ರಿಲ್ 3 ರಿಂದ 5ರ ವರೆಗೆ ಜಿಲ್ಲಾ ಸ್ಕೌಟ್ಸ್ ಸಂಸ್ಥೆ ತುಮಕೂರು, ಸ್ಥಳೀಯ ಸಂಸ್ಥೆ ತುರುವೇಕೆರೆ ಹಾಗೂ ಕರ್ನಾಟಕ ಪಬ್ಲಿಕ್ ಶಾಲೆಯ ಸಹಯೋಗದೊಂದಿಗೆ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ದಳ ನಾಯಕರಾದ ಶ್ರೀ ಹೆಚ್.ಎಲ್. ಕೃಷ್ಣಮೂರ್ತಿಯವರು ಎಲ್ಲರನ್ನೂ ಸ್ವಾಗತಿಸಿದರು. ನಂತರ ನಿವೃತ್ತ ಉಪನಿರ್ದೇಶಕರು ಹಾಗೂ ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಹುಚ್ಚಯ್ಯನವರು ಗಿಡಕ್ಕೆ ನೀರುಣಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ "ಸ್ಕೌಟ್ ಅಂಡ್ ಗೈಡ್ಸ್‌ಗಳು ಸ್ವಾವಲಂಬಿಗಳಾಗಿ ಜೀವನ ಕೌಶಲವನ್ನು ತಿಳಿದಿರುತ್ತಾರೆ. ಬದುಕುವ ಕಲೆಯನ್ನು ಕಲಿತಿರುತ್ತಾರೆ. ಉತ್ತಮ ನಾಯಕ ಗುಣ, ಧೈರ್ಯ, ನಿಷ್ಠೆಯನ್ನು ಹೊಂದಿರುತ್ತಾರೆ. ಸಮಾಜದಲ್ಲಿ ಒಳ್ಳೆಯ ಗೌರವವಿದೆ. ಎಲ್ಲೆಲ್ಲಿಯೂ ಗುರುತಿಸುವಿಕೆ ಕಂಡು ಬರುತ್ತದೆ" ಎಂದು ಹೇಳಿದರು.

ಕಾರ್ಯದರ್ಶಿಗಳು ಹಾಗೂ ಶಿಕ್ಷಕರೂ ಆದ ಶ್ರೀ ಕಮಲ್‌ರಾಜ್ ರವರು "ಮಕ್ಕಳು ಪ್ರಾಣಿ ಪಕ್ಷಿಗಳಿಗೆ ನೀರುಣಿಸುವ ಕಾರ್ಯವನ್ನು ಮಾಡಬೇಕೆಂದು ತಿಳಿಸಿದರು. ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕಿಯರಾದ ಶ್ರೀಮತಿ ಸುಶೀಲಮ್ಮನವರು ಮಾತನಾಡುತ್ತಾ "ಮೊದಲು ನನಗೆ

ಸ್ಕೌಟ್ಸ್–ಗೈಡ್ಸ್ ಬಗ್ಗೆ ಅರಿವಿರಲಿಲ್ಲ. ಇಲ್ಲಿಗೆ ಬಂದ ಮೇಲೆ ನನಗೆ ಅರ್ಥವಾಯಿತು. ಅದಕ್ಕೆ ಎಲ್ಲಾ ನಾಯಕರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ. ನಿವೃತ್ತಿಯಾದ ಮೇಲೆ ನಾನೂ ಸಹ ಗೈಡ್ ಲೀಡರ್ ಆಗಿ ಕೆಲಸ ಮಾಡಲು ಬಯಸುತ್ತೇನೆ" ಎಂದು ಹೇಳಿದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೆಗ್ಗೆರೆಯ ಮುಖ್ಯ ಶಿಕ್ಷಕರಾದ ಶ್ರೀ ರಾಜಶೇಖರಯ್ಯ ನವರು ಆಗಮಿಸಿ "ಸ್ಕೌಟ್ಸ್–ಗೈಡ್ಸ್ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ್ದು ನನಗೆ ಖುಷಿ ತಂದಿದೆ. ವಿದ್ಯಾರ್ಥಿಗಳೆಲ್ಲರೂ ಸ್ಕೌಟ್ಸ್–ಗೈಡ್ಸ್‌ಗಳಾಗಿ" ಎಂದು ಕಿವಿಮಾತು ಹೇಳಿದರು. ದಳನಾಯಕರಾದ ಶ್ರೀ ಹೆಚ್.ಎಲ್. ಕೃಷ್ಣಮೂರ್ತಿಯವರು ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

* ಏಪ್ರಿಲ್ 5 ರಂದು ಬೇಸಿಗೆ ಶಿಬಿರದ ಮುಕ್ತಾಯ ಸಮಾರಂಭವನ್ನು ಏರ್ಪಡಿಸಲಾಯಿತು. ಅಧ್ಯಕ್ಷತೆಯನ್ನು ಶ್ರೀ ಟಿ.ಸಿ. ಗಂಗಾಧರ್, ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ರಮೇಶ್ ಯೋಗ ಗುರುಗಳು, ಶ್ರೀ ರಂಗಸ್ವಾಮಿ ಹಾಗೂ ಶ್ರೀ ಶಿವಶಂಕರಯ್ಯ ಉಪಸ್ಥಿತರಿದ್ದರು. ದಳ ನಾಯಕರಾದ ಶ್ರೀ ಹೆಚ್.ಎಲ್. ಕೃಷ್ಣಮೂರ್ತಿಯವರು ಸ್ವಾಗತಿಸಿ ನಿರೂಪಿಸಿದರು. ಶ್ರೀ ಶಿವಶಂಕರಯ್ಯರವರು ವಂದಿಸಿದರು.

### ವಿಜಯನಗರ

* ಜಿಲ್ಲಾ ಮಟ್ಟದ ಬೇಸಿಗೆ ಶಿಬಿರವನ್ನು ಏಪ್ರಿಲ್ 16 ರಂದು ಡಿ.ಎ.ವಿ. ಪಬ್ಲಿಕ್ ಶಾಲೆ ಸಂಕ್ಲಾಪುರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸಸಿಗೆ ನೀರುಣಿಸುವುದು ಮೂಲಕ ಉದ್ಘಾಟನೆ ಮಾಡಲಾಯಿತು. ಈ ಉದ್ಘಾಟನೆಯನ್ನು ಸದರಿ ಶಾಲೆಯ ಪ್ರಾಚಾರ್ಯರಾದ ಶ್ರೀ ಅಶಿತೋಶ್ ಇವರು ನೆರವೇರಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿ ಶ್ರೀ  ಮಂಜುನಾಥಪ್ಪ ಇವರು ವಹಿಸಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ತಿಪ್ಪೇಸ್ವಾಮಿ ಇವರು ಅತಿಥಿಗಳಾಗಿ ಭಾಗವಹಿಸಿದ್ದರು. ಏಪ್ರಿಲ್ 17 ರಂದು ಸ್ಥಳೀಯ ಸರ್ಕಾರಿ ಆಸ್ಪತ್ರೆಯಿಂದ ಆಗಮಿಸಿದ ಸಿಬ್ಬಂದಿಯವರು ಮತ್ತು ವೈದ್ಯರುಗಳು ಆಂಬುಲೆನ್ಸ್ ವ್ಯಾನ್ ಪ್ರಾವೀಣ್ಯತಾ ಪದಕ ಪಡೆದುಕೊಳ್ಳುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು. ಏಪ್ರಿಲ್ 18 ರಂದು ಅಗ್ನಿಶಾಮಕ ದಳದ ಸಿಬ್ಬಂದಿಯಿಂದ ಸ್ಕೌಟ್ಸ್–ಗೈಡ್ಸ್‌ಗಳಿಗೆ ಅಗ್ನಿ ಅವಘಡ ಸಂಭವಿಸಿದಾಗ ಯಾವ ರೀತಿ ಕ್ರಮಗಳನ್ನು ಅನುಸರಿಸಬೇಕು ಮತ್ತು ಅಗ್ನಿ ಅವಘಡ ಸಂಭವಿಸದಂತೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿದರು. ಏಪ್ರಿಲ್ 19 ರಂದು ಸಮೀಪದ ಪಾರ್ಲೆಜಿ ಬಿಸ್ಕತ್ ತಯಾರಿಕಾ ಕಾರ್ಖಾನೆಗೆ ಭೇಟಿ ನೀಡಿ ಸಂಪೂರ್ಣ ವಿವರಗಳನ್ನು ಪಡೆಯಲಾಯಿತು. ಏಪ್ರಿಲ್ 20 ರಂದು ಸಮೀಪದ ಶ್ರೀ ಜಂಬುನಾಥ ದೇವಸ್ಥಾನಕ್ಕೆ ಹೊರ ಸಂಚಾರ ಕೈಗೊಳ್ಳಲಾಯಿತು. ಏಪ್ರಿಲ್ 21 ರಂದು ಶಾಲಾ ಆವರಣದಲ್ಲಿಯೇ ಅಡುಗೆ ಮಾಡುವ ಕರಕುಶಲತೆಯನ್ನು ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ 130 ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು.




## ಶ್ರದ್ಧಾಂಜಲಿ



ಬೆಳಗಾವಿ ಜೈನ್ ಹೆರಿಟೇಜ್ ಶಾಲೆಯಲ್ಲಿ ಲೇಡಿ ಕಬ್ ಮಾಸ್ಟರ್ ಆಗಿರುವ ಶ್ರೀಮತಿ ಪಲ್ಲವಿ ನಾಡಕರ್ಣಿ ಇವರ ತಾಯಿಯವರಾದ **ಶ್ರೀಮತಿ ಮಂಗಳಾ ವಿ. ಭಟ್** ಇವರು ದಿನಾಂಕ 08–04–2024 ರಂದು ಬೆಳಿಗ್ಗೆ 11 ಗಂಟೆಗೆ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ಇವರು ಅಪಾರ ಬಂಧು ಬಳಗವನ್ನು ಆಗಲಿದ್ದಾರೆ.



ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ಸಾಮ್ರಾಟ್ ರೋವರ್ ಕ್ರೂನ ಹಿರಿಯ ರೋವರ್, ರಾಷ್ಟ್ರಪತಿ ರೋವರ್ ಪ್ರಶಸ್ತಿ ಪುರಸ್ಕೃತರಾದ **ಲೇಫ್ಟಿನೆಂಟ್ ಕರ್ನಲ್ ಅಮರನಾಥ್** ಇವರು ದಿನಾಂಕ 30–04–2024 ರಂದು ನಿಧನರಾದರು.



**ಕುಮಾರಿ ಸಾವಿತ್ರಿ ಅಶೋಕ,** ಗೈಡ್, ಬಸ್ತವಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದುರದುಂಡ, ಮೂಡಲಗಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಏಪ್ರಿಲ್ 15ರಂದು ನಿಧನರಾದರು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ALVA'S Education Foundation®

# ALVA'S COLLEGE
MOODUBIDIRE, D.K

ACCREDITED WITH GRADE A NAAC

## WE ARE AUTONOMOUS NOW

## ADMISSIONS OPEN

**COMMERCE**
- B.Com - General
- B.Com - CA/CS/CMA/ACCA
- B.Com - Tax Procedure
- B.Com - Computer Application
- B.Com - Finance & Accounting

**SCIENCE**
- Physics
- Botany
- Biochemistry
- Statistics
- Biotechnology
- Mathematics
- Microbiology
- Chemistry
- Zoology
- Computer Science

**ARTS**
- JOURNALISM
- PSYCHOLOGY
- ENGLISH MAJOR
- HISTORY
- SOCIOLOGY
- POLITICAL SCIENCE
- ECONOMICS
- PHYSICAL EDUCATION

**VOCATIONAL COURSE**
- B.Sc - Hospitality Science (Hotel Management)
- B.Sc - Animation and Visual Effects
- B.Sc - Fashion Design
- BVA - Bachelor of Visual Arts
- B.Sc - Food, Nutrition and Dietetics

**MANAGEMENT**
- BBA
- BA HRD

**COMPUTER SCIENCE**
- BCA
Bachelor of Computer Application

**SOCIAL WORK**
- BSW
Bachelor of Social Work

- *Special Scholarship for Meritorious Students*
- *Cultural and Sports Adoption for Selected Students*
- *Aviation Course For Cabin Crew and Ground Crew*
- *Intergrated Training for UPSC/KPSC/IBPS Coaching with Degree programme*
- *Largest Placement Drive with more than 300 Companies Participation*
- *Accredited Center For CA Coaching By ICAI*

**8884455526, 8147760394**
**8197617333, 9740668967**

principal@alvascollege.com www.alvascollege.com

## 2024 ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ವಿವಿಧ ಜಿಲ್ಲೆಗಳಲ್ಲಿ ನಡೆದ ಬೇಸಿಗೆ ಶಿಬಿರದ ಚಟುವಟಿಕೆಗಳಲ್ಲಿ ಭಾಗವಹಿಸಿದ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು


ಬಳ್ಳಾರಿ


ಬೆಂಗಳೂರು ಪೂರ್ವ


ಬೀದರ್


ಚಾಮರಾಜನಗರ


ಗದಗ


ಕೊಡಗು


ಕೊಪ್ಪಳ


ಮಧುಗಿರಿ

RNI No: 13348/1959. Title Code: KARBIL00285. MAG No. MAG(3)/NPP/184/2021-2022
Postal Regd. No. KA/BGGPO/2580/2021-23. Licensed to Post Without Prepayment License
No. PMG/BG/WPP-340/2021-2023. Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 28)

SHAHEEN
GROUP OF INSTITUTIONS

# Admissions Open

## COURSES OFFERED

- **PUC (Science)**
  Integrated with NEET/JEE
- **NEET Long Term**
  Repeaters Batch
- **PUC (Arts)**
  Integrated with UPSC/CLAT
- **PUC (Commerce)**
  Integrated with CA Foundation
- **B.A, B.Sc, B.Com BBA & BCA**
  Integrated with UPSC
- **Pre Cum Mains UPSC for Graduates**
  One Year Exclusive UPSC Course
- **MSc (Maths)**

Head Office: Shaheen Nagar, BIDAR - 585403.
www.shaheengroup.org | Toll Free: 1800 121 6235



If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: K. Gangappa Gowda, Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Road, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001. Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru 560 026
Editor: K. Gangappa Gowda